ಕಲ್ಯಾಣ ಕಿರಣ

ಮಾರ್ಚ್-2014

ಬೆಲೆ-20/-



ದೆಹಲಿಯ ಜಂತರ್ ಮಂತರ್‌ನಲ್ಲಿ ಲಿಂಗಾಯತ ಮಹಾರ್‍ಯಾಲಿ ಫೆಬ್ರವರಿ 17 ಮತ್ತು 18ರಂದು ಪೂಜ್ಯ ಮಾತಾಜಿಯವರಿಂದ ಧ್ವಜ ಬೀಸಿ ರ್‍ಯಾಲಿಗೆ ಚಾಲನೆ.



ಲಿಂಗಾಯತ ಮಹಾರ್‍ಯಾಲಿ ವೇದಿಕೆಯ ಒಂದು ನೋಟ ಸಾಮೂಹಿಕ ಪ್ರಾರ್ಥನೆಯ ದೃಶ್ಯ



ಗೃಹಮಂತ್ರಿಗಳಾದ ಶ್ರೀ ಸುಶೀಲ್ ಕುಮಾರ ಶಿಂಧೆ ಅವರಿಗೆ ಮನವಿ ಪತ್ರ ನಿಡಿಕೆ



ರೈಲ್ವೆ ಖಾತೆಯ ಕೇಂದ್ರ ಸಚಿವ ಶ್ರೀ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಮನವಿ ಪತ್ರ ನೀಡಿಕೆ



ಕೇಂದ್ರ ಪೆಟ್ರೋಲಿಯಂ ಸಚಿವ ಶ್ರೀ ವೀರಪ್ಪ ಮೊಯಿಲಿಯವರಿಗೆ ಮನವಿ ಪತ್ರ ನೀಡಿಕೆ



ಶ್ರೀ ಮಾತೆಗೆ ನುಡಿ ನಮನ

ಗಣ ದಾಸೋಹಿ ಮಾತಾಜಿ ವಚನ ಸಂಗ್ರಹಿ ಮಾತಾಜಿ
ಲಿಂಗಾಚಾರಿ ಮಾತಾಜಿ ಸದಾಚಾರಿ ಮಾತಾಜಿ

ಶಿವಾಚಾರಿ ಗುರು ಮಾತಾಜಿ ಗಣಾಚಾರಿ ಗುರು ಮಾತಾಜಿ
ಭೃತ್ಯಾಚಾರಿ ಮಾತಾಜಿ ಸಮಾಜ ವಿಜ್ಞಾನಿ ಮಾತಾಜಿ

ವ್ಯಷ್ಟಿ ಕಲ್ಯಾಣಿ ಮಾತಾಜಿ ಸಮಷ್ಟಿ ಕಲ್ಯಾಣಿ ಮಾತಾಜಿ
ರಾಷ್ಟ್ರ ಕಲ್ಯಾಣಿ ಮಾತಾಜಿ ವಿಶ್ವಕಲ್ಯಾಣಿ ಮಾತಾಜಿ
ಧರ್ಮಬೋಧಕರೆ ಮಾತಾಜಿ ಧರ್ಮಪಾಲಕರೆ ಮಾತಾಜಿ
ಅಮೂಲ್ಯ ಚಿಂತಕಿ ಮಾತಾಜಿ ಅಹಿಂಸಾವಾದಿ ಮಾತಾಜಿ

ವಚನ ಶುದ್ಧೀಕರಣೆ ಮಾತಾಜಿ ವಚನ ವಿಮರ್ಶಕಿ ಮಾತಾಜಿ
ವಚನ ವಿಶ್ಲೇಷಕಿ ಮಾತಾಜಿ ವಚನಾಂಬರಿ ಗುರು ಮಾತಾಜಿ

ಶರಣಗಣಮಣಿ ಮಾತಾಜಿ ಶರಣಜನರಕ್ಷಕಿ ಮಾತಾಜಿ
ಲಿಂಗದೇವನಿಷ್ಠ ಮಾತಾಜಿ ಜಂಗಮವಂದಿತೆ ಮಾತಾಜಿ

ಅಷ್ಟಾವರಣಿ ಮಾತಾಜಿ ಷಡಾಚಾರಿ ಶ್ರೀ. ಮಾತಾಜಿ
ಷಟಸ್ಥಲಾರೋಹಿ ಮಾತಾಜಿ ಷಡಂಗ ದಾಸೋಹಿ ಮಾತಾಜಿ

ಕ್ರಾಂತಿಕಾರಿಣಿಯೆ ಮಾತಾಜಿ ಶಾಂತಾವತರಣಿಯೆ ಮಾತಾಜಿ
ಸಕಲಜೀವಹಿತೆ ಮಾತಾಜಿ ಸರ್ವೇಶಾಸುತೆ ಮಾತಾಜಿ

ವಿಶ್ವಕುಟುಂಬಿ ಮಾತಾಜಿ ಲಿಂಗದೇವಪ್ರಿಯೆ ಮಾತಾಜಿ
ಗುರುಬಸವಸುತೆ ಮಾತಾಜಿ ಮಹಾಜಗದ್ಗುರು ಮಾತಾಜಿ

ಲಿಂಗಾನಂದಸುತೆ ಮಾತಾಜಿ ಗಂಗಾಮಾತಾಜಿಯ ಮಾತಾಜಿ
ಶರಣರಾಪ್ರಿಯೆ ಮಾತಾಜಿ ಸಿದ್ಧರಾಮನ ಗುರು ಮಾತಾಜಿ

ಪಾಹಿಮಾಂ ಪಾಹಿಮಾಂ ಮಾತಾಜಿ
ರಕ್ಷಮಾಂ ರಕ್ಷಮಾಂ ಮಾತಾಜಿ

ರಕ್ಷಮಾಂ ರಕ್ಷಮಾಂ ಮಾತಾಜಿ
ರಕ್ಷಮಾಂ ರಕ್ಷಮಾಂ ಮಾತಾಜಿ

– ಪೂಜ್ಯ ಶ್ರೀ ಜಗದ್ಗುರು ಸಿದ್ಧರಾಮೇಶ್ವರ ಸ್ವಾಮೀಜಿ
ಪೀಠಾಧ್ಯಕ್ಷರು, ಅಲ್ಲಮಪ್ರಭು ಶೂನ್ಯ ಪೀಠ
ಬಸವ ಕಲ್ಯಾಣ

ಸಂಪುಟ-45 ಬಸವ ಶಕೆ -880 ಪಂಚ ವಾರ್ಷಿಕ ಸದಸ್ಯತ್ವ 1000 ರೂ.
ಸಂಚಿಕೆ-03 ಮಾರ್ಚ್-2014 ವಾರ್ಷಿಕ ಚಂದಾ 200 ರೂ.

ಕಿರಣ ಗನ್ನಡಿ

ಏಪ್ರಿಲ್ ತಿಂಗಳಲ್ಲಿ ಬರುವ ಹಬ್ಬ-ಹುಣ್ಣಿಮೆಗಳು-ಉತ್ಸವಗಳು

* ಅಲ್ಲಮಗಿರಿಯಲ್ಲಿ ಲಿಂಗಾಯತ ಗಣ ಮೇಳಾವ – ಮಾರ್ಚ್ 31, ಏಪ್ರಿಲ್ 01 ಮತ್ತು 12
* ಅಕ್ಕಮಹಾದೇವಿ ಜಯಂತಿ ಏಪ್ರಿಲ್ – 15
* ಹರಳಯ್ಯ ಜಯಂತಿ ಏಪ್ರಿಲ್ – 15
* ಬಸವ ಜಯಂತಿ ಮೇ – 2

ಕಲ್ಯಾಣ ಕಿರಣ ಚಂದಾ

ಕಲ್ಯಾಣ ಕಿರಣದ ವಾರ್ಷಿಕ ಚಂದಾ 200ರೂ. ಪಂಚವಾರ್ಷಿಕ ಚಂದಾ 1000ರೂ. ಕಳಿಸಬೇಕು ಎನ್ನುವವರು ಎಂ.ಓ. ಮೂಲಕ, ಬ್ಯಾಂಕ್ ಡ್ರಾಫ್ಟ್ ಮೂಲಕ ಕಳಿಸಬಹುದು. ವಿಶ್ವಕಲ್ಯಾಣ ಮಿಷನ್ ಚಾರಿಟಬಲ್ ಟ್ರಸ್ಟ್ ಹೆಸರಿಗೆ ಡಿ.ಡಿ. ತೆಗೆಸಬೇಕು.

ವಿಶ್ವಕಲ್ಯಾಣ ಮಿಷನ್ ಚಾರಿಟಬಲ್ ಟ್ರಸ್ಟ್
ಬಸವ ಮಂಟಪ, 2035, 20ನೇ ಮೇನ್, ರಾಜಾಜಿನಗರ 2ನೇ ಬ್ಲಾಕ್
ಬೆಂಗಳೂರು-560010
ದೂರವಾಣಿ : 080-23131476 / 9945806297

Kalyana Kirana -Reg No.19988/70. Monthly Magazine Edited and Published by Pujya Mate Kasturidevi on behalf of Vishwa kalyana Mission Charitable Trust, Basava Mantapa, 2035, 20th Main, 2nd Block, Rajajinagar, Bangalore-560010. Phone : 080-23131476, Send SMS to 9945806297/ 9738028585/ 8892912123
Email :- kalyanakirana1970@gmail.com



ಮಹಾರಾಷ್ಟ್ರ ರಾಜ್ಯದ ಕೊಲ್ಹಾಪುರ ಜಿಲ್ಲೆಯ ಹಾತ್‌ಕಣಂಗಲೆ ತಾಲ್ಲೋಕಿನ ಆಳತೆ ಗ್ರಾಮದ ಅಲ್ಲಮ ಪ್ರಭು ಗಿರಿಯಲ್ಲಿ 2014ರ ಮಾರ್ಚ್ 31, 01 ಮತ್ತು 02 ರಂದು



ಒಂಬತ್ತನೆಯ ಲಿಂಗಾಯತ ಗಣಮೇಳ

ಶರಣ ಬಂಧುಗಳಲ್ಲಿ ಶರಣು ಶರಣಾರ್ಥಿ,

ವಿಶ್ವಗುರು ಬಸವಣ್ಣನವರು 12ನೆಯ ಶತಮಾನದಲ್ಲಿ ಅನುಭವ ಮಂಟಪ ಎಂಬ ಅಧ್ಯಾತ್ಮಿಕ ಸಂಸ್ಥೆಯನ್ನು ಕಟ್ಟಿ, ಅದರಲ್ಲಿ ಶೂನ್ಯಪೀಠ ಎಂಬ ಧರ್ಮಪೀಠವನ್ನು ಸ್ಥಾಪಿಸಿ ಅದಕ್ಕೆ ವ್ಯೋಮಕಾಯ ಸಿದ್ಧರಾದ ಅಲ್ಲಮ ಪ್ರಭುದೇವರನ್ನು ಮೊದಲನೆಯ ಅಧಿಕಾರಿಯನ್ನಾಗಿ ಪೀಠಾರೋಹಣ ಮಾಡಿಸಿದರು. ಶ್ರೀ ಅಲ್ಲಮ ಪ್ರಭುದೇವರು ಮತ್ತು ಸೊಲ್ಲಾಪುರದ ಶ್ರೀ ಸಿದ್ಧರಾಮೇಶ್ವರರು ಧರ್ಮ ಪ್ರಚಾರಾರ್ಥ ಇಂದಿನ ಕರ್ನಾಟಕ, ಮಹಾರಾಷ್ಟ್ರದ ವಿವಿಧ ಸ್ಥಳಗಳಲ್ಲೆಲ್ಲ ಗಂಗೆ-ಯಮುನೆಯರಂತೆ ಸಂಚರಿಸಿ ಭಕ್ತರನ್ನು ಉದ್ಧರಿಸಿದ್ದಾರೆ. ಜೊತೆಗೂಡಿ ಸಂಚರಿಸಿದ ಉಭಯತರೂ ಒಂದು ವಿಶಿಷ್ಟ ಸ್ಥಳದಿಂದ ಪರಸ್ಪರ ಬೀಳ್ಕೊಟ್ಟು ಸಾಭಾರಿ ಜಂಗಮರಾದ ಶ್ರೀ ಸಿದ್ಧರಾಮೇಶ್ವರರು ಸೊಲ್ಲಾಪುರಕ್ಕೆ ಕರ್ತವ್ಯ ಮುಖಿಯಾಗಿ ವಾಪಸ್ಸು ಹೊರಡುತ್ತಾರೆ. ನಿರಾಭಾರಿ ಜಂಗಮರಾದ ಶ್ರೀ ಅಲ್ಲಮ ಪ್ರಭುದೇವರು ಅಶ್ವಾರೋಹಿಯಾಗಿ ಶಿಷ್ಯರೊಡನೆ ಸಂಚಾರವನ್ನು ಮುಂದುವರಿಸುತ್ತಾರೆ. ಒಂದು ಸ್ಥಳದಲ್ಲಿ ತಪೋಮಗ್ನರಾಗಿ ತಂಗಿರುತ್ತಾರೆ. ಅದೇ ಮಹಾರಾಷ್ಟ್ರ ರಾಜ್ಯದ ಕೊಲ್ಲಾಪುರ ಜಿಲ್ಲೆಯ ಹಾತ್‌ಕಣಂಗಲೆ ತಾಲ್ಲೋಕಿನ ಆಳತೆ ಗ್ರಾಮದ ಬಳಿ ಇರುವ ಅಲ್ಲಮ ಪ್ರಭು ಗಿರಿ. ಮರಾಠಿಯಲ್ಲಿ ಅಲ್ಲಮ ಪ್ರಭು ಡೋಂಗರ್ ಎನ್ನುತ್ತಾರೆ. ಇದು ಕೊಲ್ಹಾಪುರದಿಂದ 25 ಕಿ.ಮೀಟರ್ ದೂರದಲ್ಲಿ ಕೊಲ್ಹಾಪುರ -ಸಾಂಗ್ಲಿ-ಸೊಲ್ಲಾಪುರ ಹೆದ್ದಾರಿಯ ಮೇಲಿದೆ. ಸಮೀಪದಲ್ಲಿ ಇಚಲ ಕರಂಜಿ, ಮೀರಜ್, ಸಾಂಗ್ಲಿ ಮತ್ತು ವಡಗಾಂವ ಪಟ್ಟಣಗಳು ಇವೆ. ಮೀರಜ್‌ವರೆಗೆ ರೇಲ್ವೆ ಸೌಲಭ್ಯವಿದೆ. ಪ್ಯಾಸೆಂಜರ್ ರೇಲ್ವೆ ಗಾಡಿಗಳು ಹಾತ್ ಕಣಂಗಲೆ ಮೂಲಕ ಕೊಲ್ಹಾಪುರಕ್ಕೆ ಹೋಗುತ್ತವೆ ಮತ್ತು ಹಾತ್‌ಕಣಂಗಲೆ ಯಲ್ಲಿ ನಿಲ್ಲುತ್ತವೆ.

ಅಲ್ಲಮ ಪ್ರಭು ನಂದಾದೀಪ

ಶ್ರೀ ಅಲ್ಲಮ ಪ್ರಭುದೇವರು ಪೂಜೆಯ ಸಮಯದಲ್ಲಿ ಹಚ್ಚಿದ ಜ್ಯೋತಿಯನ್ನು ಅಲ್ಲಮ ಪ್ರಭು ಶರಣಾಲಯದ ಪೂಜಾರಿ ವಂಶಸ್ಥರು ನಂದಾದೀಪವಾಗಿ ಕಾಯ್ದುಕೊಂಡು ಬಂದಿರುವುದು ಸ್ಥಳ ವಿಶೇಷ. ಶ್ರೀ ಸಿದ್ಧರಾಮೇಶ್ವರರ ಶರಣಾಲಯವು ಸಹ ಪಕ್ಕದಲ್ಲೇ ಇದ್ದು ಕೆಲವು ಕಾಲ ಅವರು ಸಹ ಈ ಗಿರಿಯಲ್ಲಿ ತಂಗಿದ್ದಾರೆ. ಈ ಉಭಯತರೂ ಪೂಜೆ-ಧ್ಯಾನಗಳಿಗೆ ಬಳಸುತ್ತಿದ್ದ ಗವಿಯು ಶ್ರೀ ಸಿದ್ಧರಾಮೇಶ್ವರ ಶರಣಾಲಯದ ಕೆಳಗೆ ಇದೆ. ಅಲ್ಲಮ ಪ್ರಭುಗಿರಿಗೆ ಸುಮಾರು 4 ಕಿ.ಮೀ ದೂರದಲ್ಲಿ ಸಿದ್ಧರಾಮೇಶ್ವರ ಗಿರಿ (ಸಿದ್ದೋಬಾ ಡೋಂಗರ್)ಇದ್ದು ಎತ್ತರವಾದ ಆ ಗುಡ್ಡದ ಮೇಲೆ ಸಹ ಸಿದ್ಧರಾಮೇಶ್ವರ ಶರಣಾಲಯವಿದೆ. ಈ ಜಂಗಮ ಕ್ಷೇತ್ರಗಳು ಹೆಚ್ಚಿನ ಪ್ರಚಾರವನ್ನು ಪಡೆಯದೆ ಇರುವುದು ಮತ್ತು ಯಾವುದೇ ವಿಶೇಷ ಅಭಿವೃದ್ಧಿ ಹೊಂದದಿರುವುದು ವಿಷಾದನೀಯ ಸಂಗತಿಯಾಗಿದೆ.

ಬಸವ ಧರ್ಮ ಪೀಠದ ಧ್ಯೇಯೋದ್ದೇಶ

ಕೂಡಲ ಸಂಗಮದ ಬಸವ ಧರ್ಮ ಪೀಠ ಟ್ರಸ್ಟ್ ಶರಣರ ಸ್ಥಾನಗಳನ್ನು ಅಭಿವೃದ್ಧಿ ಪಡಿಸುವ ಆಶಯವನ್ನು ಹೊಂದಿದ್ದು ಅಲ್ಲಮ ಪ್ರಭು ಗಿರಿ(ಡೋಂಗರ್)ಯಲ್ಲಿ ಜಗದ್ಗುರು ಅಲ್ಲಮಪ್ರಭು

ಶರಣಾಲಯಕ್ಕೆ ಹತ್ತಿರದಲ್ಲಿ 14 ಎಕರೆಯಷ್ಟು ಜಮೀನನ್ನು ಖರೀದಿಸಿದೆ. ಬೋರ್ ವೆಲ್,ನೀರಿನ ತೊಟ್ಟಿ, ಕಾರ್ಯಾಲಯ (Office)ಮತ್ತು ವಾಸಕ್ಕೆ 3 ಕೊಠಡಿ, ಒಂದು ಹಾಲ್ ಸಹ ಕಟ್ಟಿಸಲಾಗಿದೆ. ಈ ಸದ್ಯ ಪ್ರತಿ ಅಮವಾಸ್ಯೆಯಂದು ಶರಣ ಸಂಗಮ -ಪ್ರಾರ್ಥನೆ ಮತ್ತು ಅನುಭವ ಗೋಷ್ಠಿಯನ್ನು ನಡೆಸಲಾಗುತ್ತಿದ್ದು ಸುತ್ತಲಿನ ಪ್ರದೇಶದಿಂದ ಶರಣ ಬಂಧುಗಳು ಅಲ್ಲಮ ಗಿರಿಗೆ ಬರುತ್ತಾರೆ. ಮುಂದೆ ವಿಸ್ತಾರವಾದ ಕಾರ್ಯ ಯೋಜನೆಯ ಮಾಸ್ಟರ್ ಪ್ಲಾನ್ ಪ್ರಕಟಿಸ ಲಾಗುವುದು. ಮತ್ತು ಕಟ್ಟಡ ನಿಧಿಗೆ, ದಾಸೋಹ ನಿಧಿಗೆ ದೇಣಿಗೆಯನ್ನು ಸಂಗ್ರಹಿಸಲಾಗುವುದು.

ಪೂಜ್ಯ ಶ್ರೀ ಜಗದ್ಗುರು ಬಸವ ಲಿಂಗ ಸ್ವಾಮಿಗಳವರಿಂದ ಅಲ್ಲಮಪ್ರಭು ಯೋಗ ಪೀಠಾರೋಹಣ ಸಂಜೆ 5ಕ್ಕೆ

ಶೂನ್ಯ ಪೀಠಾಧೀಶ ಅಲ್ಲಮ ಪ್ರಭುದೇವರು ಮತ್ತು ಕಾಯಕ ಯೋಗಿ ಸಿದ್ಧರಾಮೇಶ್ವರರು ಪಾದವಿಟ್ಟ ಈ ಜಂಗಮ ಕ್ಷೇತ್ರವನ್ನು ಅಭಿವೃದ್ಧಿ ಪಡಿಸಬೇಕೆಂದು, ಲಿಂಗಾಯತ ಸಮಾಜದ ಸಂಘಟನೆಯ ದೃಷ್ಟಿಯಿಂದ ಮಹಾರಾಷ್ಟ್ರದಲ್ಲಿ ಬಸವ ಧರ್ಮಪೀಠದ ಶಾಖೆಯೊಂದನ್ನು ಹೊಂದುವುದು ತೀರಾ ಅತ್ಯಗತ್ಯ ಎಂಬ ಮಹಾರಾಷ್ಟ್ರ ಶರಣ ಬಂಧುಗಳ ಬೇಡಿಕೆಯಂತೆ 2006ನೇ ಇಸವಿಯ ಚೈತ್ರ ಶುದ್ಧ ಪ್ರತಿಪದೆ ಯುಗಾದಿಯ ದಿನ ಅಲ್ಲಮಪ್ರಭು ಪೀಠಾರೋಹಣ ಸಂಸ್ಮರಣ ದಿನಕ್ಕೆ ಹೊಂದಿಕೊಂಡು ಮಾರ್ಚ್ ತಿಂಗಳಿನ 29 ಮತ್ತು 30ನೆಯ ದಿನಾಂಕಗಳಂದು ಪ್ರಥಮ ಲಿಂಗಾಯತ ಗಣ ಮೇಳವನ್ನು ಏರ್ಪಡಿಸಲಾಯಿತು.

ಕೂಡಲ ಸಂಗಮದ ಬಸವ ಧರ್ಮಪೀಠ, ಮಹಾರಾಷ್ಟ್ರ ರಾಷ್ಟ್ರೀಯ ಬಸವ ದಳಗಳ ಒಕ್ಕೂಟದ ಸಂಯುಕ್ತ ಆಶ್ರಯದಲ್ಲಿ ಅಲ್ಲಮ ಪ್ರಭು ಗಿರಿಯಲ್ಲಿ ಲಿಂಗಾಯತ ಗಣಮೇಳವನ್ನು ನಡೆಸಲಾಗುವುದು. ದಿ.31-3-2014 ಬೆಳಿಗ್ಗೆ 10.30ಕ್ಕೆ -ಉದ್ಘಾಟನೆ, ಮಧ್ಯಾಹ್ನ - ಚಿಂತನಗೋಷ್ಠಿ, ಸಂಜೆ -ಪ್ರವಚನ, ಸಾಮೂಹಿಕ ಕೀರ್ತನ(ಭಜನೆ),ಅಲ್ಲಮಪ್ರಭು ತೊಟ್ಟಿಲು ಕಾರ್ಯಕ್ರಮ ಶನಿವಾರ ದಿ.01-4-14ರಂದು ಸುಪ್ರಭಾತದಲ್ಲಿ ಇಷ್ಟಲಿಂಗಾರ್ಚನೆ, ಬೆಳಿಗ್ಗೆ 10-30ರಿಂದ ಸಮುದಾಯ ಪ್ರಾರ್ಥನೆ - ಸಿದ್ಧರಾಮೇಶ್ವರ ಗಿರಿಯಿಂದ ಜ್ಯೋತಿಯನ್ನು ತಂದು ತಿರುಗುತ್ತಿಯಿಂದ ಮೆರವಣಿಗೆ ಮೂಲಕ ಗುಡಿಗೆ ಹೋಗಲಾಗುವುದು. ನಂತರ ಅಲ್ಲಮ ಪ್ರಭು ಯೋಗ ಪೀಠಾರೋಹಣ ಪೂಜ್ಯ ಶ್ರೀ ಬಸವ ಲಿಂಗ ಸ್ವಾಮಿಗಳವರಿಂದ ಭಾನುವಾರ ದಿ.02-4- 2014 ರಂದು ಬೆಳಿಗ್ಗೆ 10-30 ಕ್ಕೆ ಲಿಂಗಾಯತ ಗಣ ಮೇಳದ ಸಮಾರೋಪ ಸಮಾರಂಭ.

ಸ್ಥಳದ ಹೆಸರು: ಅಲ್ಲಮ ಪ್ರಭು ಗಿರಿ(ಡೋಂಗರ್), ಗ್ರಾಮ ಆಳತೆ; ಇದು ಕೊಲ್ಹಾಪುರದಿಂದ ಸಾಂಗ್ಲಿಗೆ ಹೋಗುವ ದಾರಿಯ ಮೇಲೆ ಕೇವಲ 25 ಕಿ.ಮೀಟರ್ ದೂರದಲ್ಲಿ ಇದೆ. ಸುಪ್ರಸಿದ್ಧ ಕೈಗಾರಿಕಾ ನಗರ ಇಚಲ ಕರಂಜಿಯಿಂದಲೂ 20 ಕಿ.ಮೀಟರ್ ದೂರದಲ್ಲಿದೆ. ಈ ಸ್ಥಳದಿಂದ ಸ್ವಲ್ಪ ದೂರದಲ್ಲಿ ಜೈನರ ಸುಪ್ರಸಿದ್ಧ ಯಾತ್ರಾಸ್ಥಳಗಳಾದ ಕುಂತಗಿರಿ ಮತ್ತು ಬಾಹುಬಲಿ ಬೆಟ್ಟವಿದೆ. ವಡಗಾಂವ ನಗರವೂ ಸಮೀಪದಲ್ಲಿದೆ. ಅಲ್ಲಮ ಪ್ರಭು ಗಿರಿ ಇರುವ ಆಳತೆ ಗ್ರಾಮವು ಹಾತ್‌ಕಣಂಗಲೆ ತಾಲ್ಲೋಕಿನಲ್ಲಿದ್ದು ಹಾತ್‌ಕಣಂಗಲೆಯವರೆಗೆ ರೇಲ್ವೆ ಲೈನ್ ಸೌಲಭ್ಯವಿದೆ. ಪ್ಯಾಸೆಂಜರ್ ಟ್ರೇನ್, ಹರಿಪ್ರಿಯ ಎಕ್ಸ್‌ಪ್ರೆಸ್ ಹಾತ್‌ಕಣಂಗಲೆಯಲ್ಲಿ ನಿಲುತ್ತವೆ. ಹಾತ್‌ಕಣಂಗಲೇ ಬಸ್‌ಸ್ಟಾಂಡ್ ಎದುರಿಗೆ ಉತ್ಸವ ಸಮಿತಿಯ ಕಾರ್ಯಾಲಯ ತೆರೆದಿದ್ದು ಊರಿಂದ ಬಂದವರು ಇಲ್ಲಿ ವಿಶ್ರಮಿಸಿಕೊಂಡು ರಾಮಲಿಂಗಕ್ಕೆ ಹೋಗುವ ರಸ್ತೆಯಲ್ಲಿ ಅಲ್ಲಮಗಿರಿಗೆ ಬರಬಹುದಾಗಿರುತ್ತದೆ. ವಾಹನಗಳ ವ್ಯವಸ್ಥೆ ಇರುತ್ತದೆ.

ಕಾರ್ಯಕ್ರಮದ ಸಮಯದಲ್ಲಿ ಬೆಟ್ಟದ ಮೇಲೆ ವಸತಿ ವ್ಯವಸ್ಥೆಯನ್ನು ತಾತ್ಕಾಲಿಕ

ಶಾಮಿಯಾನಾ ಟೆಂಟ್‌ಗಳಿಂದಲೇ ಮಾಡಬೇಕು. ಕೋಣೆಗಳ ವ್ಯವಸ್ಥೆ ಬೇಕಾದವರಿಗೆ ಇಚಲ ಕರಂಜಿ - 20 ಕಿ.ಮೀ ಮತ್ತು ಕೊಲ್ಹಾಪುರ 25 ಕಿ.ಮೀಟರ್ ದೂರದಲ್ಲಿರುವ ನಗರಗಳು. ಅಲ್ಲಿಂದ ಬರಲು ಹೋಗಲು ಬಸ್ ವ್ಯವಸ್ಥೆ ಇರುತ್ತದೆ. ಟೆಂಪೋ ಸಹ ಸಿಗುತ್ತವೆ. ದೂರದ ಊರುಗಳಿಂದ ಬರುವವರು ದಿ.30ರ ಸಂಜೆಯೊಳಗೆ ಬರಬೇಕೆಂದು, ಹತ್ತಿರದ ಸ್ಥಳಗಳಿಂದ ಬರುವವರು ದಿ.31ರ ಬೆಳಿಗ್ಗೆ 10-30ಕ್ಕೆ ನಡೆಯುವ ಉದ್ಘಾಟನಾ ಕಾರ್ಯಕ್ರಮಕ್ಕೆ ತಪ್ಪದೆ ಹಾಜರಾಗಬೇಕೆಂದು ವಿನಂತಿಸುತ್ತೇವೆ.

ಧನ ಸಹಾಯಕ್ಕೆ ಮನವಿ

ಮಾರ್ಚ್ 31, 01 ಮತ್ತು 02ರಂದು ಒಂಬತ್ತನೆಯ ಲಿಂಗಾಯತ ಗಣಮೇಳಕ್ಕೆ ಧನ ಸಹಾಯ ಮಾಡುವವರಿಗೆ ಕೆಳಗಿನಂತೆ ಅವಕಾಶವಿದೆ.

ಉಪಾಹಾರದ ವೆಚ್ಚ ಭರಿಸುವವರು	:	15000	(ಹದಿನೈದು ಸಾವಿರ)ರೂಗಳು.
ಮಹಾಪೋಷಕರು	:	10000	ರೂ ಮತ್ತು ಮೇಲೆ ಕೊಟ್ಟವರು
ಪೋಷಕರು	:	5000	ರೂ ಮತ್ತು ಮೇಲೆ ಕೊಟ್ಟವರು
ಹಿತೈಷಿಗಳು	:	500	ರೂ
ಉತ್ಸವ ಸಮಿತಿ ಸದಸ್ಯರು	:	250	ರೂ
ದಾನಿಗಳು	:	1000	ರೂ ಮತ್ತು ಮೇಲೆ ಕೊಟ್ಟವರು
ಪ್ರತಿನಿಧಿ ಶುಲ್ಕ	:	150	ರೂ

ಸ್ವಯಂ ಪ್ರೇರಣೆಯಿಂದ ಅವರವರ ಶಕ್ತ್ಯಾನುಸಾರ ಎಷ್ಟು ಬೇಕಾದರೂ ಕೊಡ ಬಹುದು. ಚೆಕ್ / ಡಿ.ಡಿ ಕಳಿಸುವವರು ಲಿಂಗಾಯತ ಗಣ ಮೇಳ ಉತ್ಸವ ಸಮಿತಿ, ಇಚಲ ಕರಂಜಿ ಶಾಖೆ ಎಂದು ಬರೆಸಬಹುದು ಅಥವಾ ಬಸವ ಮಹಾಮನೆ ಚಾರಿಟಬಲ್‌ಟ್ರಸ್ಟ್. ಎಂದಾದರೂ ಬರೆಸಬಹುದು.

ಪ್ರತಿ ವರ್ಷವೂ 1000 (ಒಂದು ಸಾವಿರ)ರೂ ಕೊಡುವ 770 ಜನ ಶರಣರ ಪಟ್ಟಿಯನ್ನು ಉತ್ಸವ ಸಮಿತಿಯವರು ಸಿದ್ಧಪಡಿಸುತ್ತಿದ್ದಾರೆ. ಸ್ವಯಂ ಪ್ರೇರಣೆಯಿಂದ ಯಾರು ಬೇಕಾದರೂ ತಮ್ಮ ಹೆಸರನ್ನು ಬರೆಸಬಹುದು.

ಸಂಪರ್ಕಿಸಬೇಕಾದ ವಿಳಾಸ

ಪೂಜ್ಯ ಶ್ರೀ ಬಸವ ಲಿಂಗ ಸ್ವಾಮಿಗಳು
ಲಿಂಗಾಯತ ಗಣಮೇಳಾವ ಉತ್ಸವ ಸಮಿತಿ
ಅಲ್ಲಮ ಪ್ರಭು ಗಿರಿ
ಆಳತೆ ಗ್ರಾಮ, ತಾ -ಹಾತ್‌ಕಣಂಗಲೆ
ಜಿ-ಕೊಲ್ಹಾಪುರ, ಮಹಾರಾಷ್ಟ್ರ ರಾಜ್ಯ
ದೂರವಾಣಿ : (0)9420585881

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಬಸವ ಧರ್ಮ ಪೀಠ, ಬಸವ ಮಂಟಪ
2035, 20ನೆಯ ಮುಖ್ಯ ರಸ್ತೆ, 2ನೇ ಬ್ಲಾಕ್
ರಾಜಾಜಿನಗರ, ಬೆಂಗಳೂರು-560010
ಕರ್ನಾಟಕ ರಾಜ್ಯ, ಭಾರತ
ದೂರವಾಣಿ:080-23131476/
9448137508

ಅಕ್ಕನ ಅಮರವಾಣಿ

"ಬಸವ ವಚನಾಮೃತ" ಡಿಸೆಂಬರ್ ಸಂಚಿಕೆಯಲ್ಲಿ ಮುಗಿದ ಮೇಲೆ ಜನವರಿಯಿಂದ ವೀರವಿರಾಗಿಣಿ ಅಕ್ಕಮಹಾದೇವಿಯ ವಚನಗಳಿಗೆ ಅರ್ಥವನ್ನು ಬರೆಯಲಾಗುವುದು ಎಂದು ತಿಳಿಸಿದ್ದೆ. ಕಾರ್ಯಕ್ರಮಗಳ ಒತ್ತಡದಿಂದ ನಂತರ ದೆಹಲಿಯ ಲಿಂಗಾಯತ ರ್‍ಯಾಲಿಯ ಸಿದ್ಧತೆಯ ಕಾರಣದಿಂದ ಅವಸರದಲ್ಲಿ ಜನವರಿ, ಫೆಬ್ರವರಿ ಸಂಚಿಕೆ ಸಿದ್ಧಪಡಿಸಿದ್ದರಿಂದ ಬರೆಯಲು ಆಗಲಿಲ್ಲ. ಶರಣ ಸಚ್ಚಿದಾನಂದ ಚಟ್ನಳ್ಳಿ ಇವರು ಸಂಪಾದಿಸಿದ ವಿಶ್ವಕಲ್ಯಾಣ ಮಿಷನ್ ಸಂಸ್ಥೆಯ ಪ್ರಕಾಶನವಾದ (ಬೆಲೆ 70ರೂ) "ಅಕ್ಕನ ಸಮಗ್ರ ವಚನಗಳು ಮತ್ತು ಯೋಗಾಂಗ ತ್ರಿವಿಧಿ" ಪುಸ್ತಕದಲ್ಲಿ ಬಂದಿರುವ ಕ್ರಮದಲ್ಲಿ ವಚನಗಳಿಗೆ ಭಾವಾರ್ಥ ಬರೆಯಲಾಗುವುದು.

– ಮಾತಾಜಿ

ಭಾಗ–1

1. ಗುರು ಕರುಣೆ

ನರಜನ್ಮವ ತೊಡೆದು ಹರಜನ್ಮವ ಮಾಡಿದ ಗುರುವೆ,
ಭವಬಂಧನವ ಬಿಡಿಸಿ ಪರಮಸುಖವ ತೋರಿದ ಗುರುವೆ,
ಭವಿಯೆಂಬುದ ತೊಡೆದು ಭಕ್ತೆ ಎಂದೆನಿಸಿದ ಗುರುವೆ,
ಚನ್ನಮಲ್ಲಿಕಾರ್ಜುನನ (ಮಹಾದೇವಿಯಕ್ಕ ಪ್ರಿಯ ಲಿಂಗದೇವನ)ತಂದೆನ್ನ
ಕೈವಶಕ್ಕೆ ಕೊಟ್ಟ ಗುರುವೆ ನಮೋ, ನಮೋ.

ಮಾನವ ಹುಟ್ಟುತ್ತ ನರ. (ವಾನರನೂ ಅಹುದು) ಹುಟ್ಟು ಗುಣಗಳಿಂದ (*Instinctive*) ಪ್ರಚೋದಿತವಾಗಿ ಬಾಳುವ ಪ್ರಾಣಿ. ಹುಟ್ಟು ಗುಣಗಳಲ್ಲಿ ಬದುಕುವುದು ಪ್ರಾಣಿಗಳ ಲಕ್ಷಣ. ಕಲಿತ ಗುಣಗಳಲ್ಲಿ ಬಾಳುವುದು ಮಾನವನ ಲಕ್ಷಣ. ದೈವೀ ಗುಣಗಳಲ್ಲಿ ಬಾಳುವುದು ಶರಣನ ಲಕ್ಷಣ. ಹರ ಜನ್ಮ ಎಂದರೆ ದಿವ್ಯ ಜೀವನ. ಗುರುವು ಹುಟ್ಟು ಗುಣಗಳಲ್ಲಿ ಅಸಂಸ್ಕಾರಿತನಾಗಿ ಬಾಳುವ ಮಾನವ ಜೀವಿಯನ್ನು ದೈವೀ ಜೀವನಕ್ಕೆ ಕರೆದೊಯ್ಯುವನು. ಭವ ಬಂಧನ ಎಂದರೆ ಹುಟ್ಟು ಸಾವುಗಳ ಸೆಳವಿನಿಂದ ಕೂಡಿದ ತಿರುಗಣೆ ಮಡುವು. ಇದರ ಸೆಳವಿನಿಂದ ಗುರುವು ಪಾರು ಮಾಡಿ ನಿಜವಾದ ಪಾರಮಾರ್ಥಿಕ ಸುಖವನ್ನು ತೋರುವನು.ಭೃ ಭವತಿ. ಮರಳಿ ಮರಳಿ ಹುಟ್ಟುವವ ಭವಿ. ದೈವೀ ಸಂಸ್ಕಾರ ಪಡೆಯದವ ಭವಿ. ಈ ಹುಟ್ಟು ಸಾವುಗಳ ಚಕ್ರದಿಂದ ಪಾರಾಗಬೇಕಾದರೆ ದೀಕ್ಷಾನುಗ್ರಹ ಸಂಸ್ಕಾರ ಪಡೆದು ಭಕ್ತರಾಗಬೇಕು. ಹಾಗೆ ಅಕ್ಕಮಹಾದೇವಿಯವರು ಗುರು ಕಾರುಣ್ಯದಿಂದ ಭವಿತ್ವವನ್ನು ತೊಡೆದುಕೊಂಡು ಭಕ್ತೆಯಾಗಿದ್ದಾರೆ. ಗುರು ಕಾರುಣ್ಯದ ಪ್ರತಿಫಲವೆಂದರೆ ಇಷ್ಟಲಿಂಗ ಪ್ರಾಪ್ತಿ. ಸೃಷ್ಟಿಕರ್ತ ಲಿಂಗದೇವನ ಕುರುಹಾದ ಇಷ್ಟಲಿಂಗಕ್ಕೆ ಚಿತ್ಕಳೆ ತುಂಬಿ ಗುರುಲಿಂಗದೇವರು ಅಕ್ಕನ ಕೈಗೆ ನೀಡಿದ್ದಾರೆ. ಇಂಥ ಗುರುವಿಗೆ ಅಕ್ಕನವರು ನಮೋ ನಮೋ ಎಂದು ನಮಿಸುತ್ತಿದ್ದಾರೆ.

2. ದೀಕ್ಷಾ ಕ್ರಮ

ಶ್ರೀ ಗುರು ಲಿಂಗದೇವರು ತಮ್ಮ ಹಸ್ತವ ತಂದು
ಎನ್ನ ಮಸ್ತಕದ ಮೇಲೆ ಇರಿಸಿದಾಗಳೆ
ಎನ್ನ ಭವಂ ನಾಸ್ತಿಯಾಯಿತ್ತು, ಎನ್ನ ತನ್ನಂತೆ ಮಾಡಿದ

ತನ್ನ ಕರಸ್ಥಲದಲ್ಲಿದ್ದ ಮಹಾಲಿಂಗವನು
ಎನ್ನ ಕರಸ್ಥಲದಲ್ಲಿ ಮೂರ್ತಿಗೊಳಿಸಿದ
ಎನ್ನ ಕರಸ್ಥಲದಲ್ಲಿದ್ದ ಮಹಾಲಿಂಗವನು
ಎನ್ನ ಮನಸ್ಥಲದಲ್ಲಿ ಮೂರ್ತಿಗೊಳಿಸಿದ
ಎನ್ನ ಮನಸ್ಥಲದಲ್ಲಿದ್ದ ಮಹಾಲಿಂಗವನು
ಎನ್ನ ಭಾವಸ್ಥಲದಲ್ಲಿ ಮೂರ್ತಿಗೊಳಿಸಿದ
ಎನ್ನ ಭಾವಸ್ಥಲದಲ್ಲಿದ್ದ ಮಹಾಲಿಂಗವನು
ಎನ್ನ ಜ್ಞಾನಸ್ಥಲದಲ್ಲಿ ಮೂರ್ತಿಗೊಳಿಸಿದ
ಎನ್ನ ಜ್ಞಾನಸ್ಥಲದಲ್ಲಿದ್ದ ಮಹಾಲಿಂಗವನು
ಎನ್ನ ಸರ್ವಾಂಗದ ಒಳಹೊರಗೆ ತೆರಹಿಲ್ಲದೆ
ಅಳವಡಿಸಿದ ನಮ್ಮ ಶ್ರೀಗುರುಲಿಂಗದೇವರು
ಚನ್ನಮಲ್ಲಿಕಾರ್ಜುನ (ಮಹಾದೇವಿಯಕ್ಕ ಪ್ರಿಯ ಲಿಂಗದೇವ)

ಲಿಂಗಾಯತ ಧರ್ಮದಲ್ಲಿ ಇಷ್ಟಲಿಂಗ ದೀಕ್ಷೆ ಬಹಳ ಮಹತ್ವಪೂರ್ಣ ಕ್ರಿಯೆ. ಮಗುವು ಹುಟ್ಟಿದಾಗ ಮಗುವಿಗೆ "ಲಿಂಗಧಾರಣೆ" ಎಂಬ ಕ್ರಿಯೆಯನ್ನು ನಡೆಸಲಾಗುವುದು. ಹುಟ್ಟಿದ ಮಗು ಗಂಡಿರಲಿ ಹೆಣ್ಣಿರಲಿ ಯಾವ ಭೇದವಿಲ್ಲದೆ ಲಿಂಗಧಾರಣೆ ಮೂಲಕ ಧರ್ಮದೊಳಕ್ಕೆ ಪ್ರವೇಶ ನೀಡಲಾಗುವುದು. ಮುಂದೆ ಮಗುವುದು ಬಾಲ್ಯಾವಸ್ಥೆ ಕಳೆದುಕೊಂಡು ಪ್ರೌಢಾವಸ್ಥೆಯನ್ನು ಪ್ರವೇಶ ಮಾಡುವಾಗ "ಲಿಂಗದೀಕ್ಷೆ" ಮಾಡಲಾಗುವುದು. ಲಿಂಗಧಾರಣೆ ನಿಶ್ಚಯ ಕಾರ್ಯವಿದ್ದಂತೆ, ದೀಕ್ಷೆ ಎಂಬುದು ಲಗ್ನ ಕಾರ್ಯವಿದ್ದಂತೆ ಲಿಂಗಧಾರಣೆಯಲ್ಲಿ ಮಗುವಿನ ತಾಯಿತಂದೆ ಪ್ರತಿಜ್ಞೆ ಮಾಡುವರು, ಲಿಂಗದೀಕ್ಷೆಯಲ್ಲಿ ಸ್ವತಃ ದೀಕ್ಷಿತರಾಗುವವರೇ ಪ್ರತಿಜ್ಞೆ ಮಾಡುವರು. (ಕೆಲವರು ಮಕ್ಕಳಿಗೆ ಲಿಂಗಧಾರಣೆ ಮಾತ್ರ ಮಾಡಿ ನಂತರ ಲಿಂಗದೀಕ್ಷೆ ಮಾಡಿಸುವುದೇ ಇಲ್ಲ. ಇದು ಹೇಗೆಂದರೆ ನಿಶ್ಚಯ ಕಾರ್ಯ ಮಾತ್ರ ಮಾಡಿ ವರ –ಕನ್ಯೆಯರಿಗೆ ಮದುವೆ ಮಾಡಿಸದೆ ಇರುವಂತೆ. ಲಿಂಗಾಯತೇತರರು ದೀಕ್ಷಾವಂತರಾಗುವರು ಅವರಿಗೆ ಹುಟ್ಟಿದಾಗ ಲಿಂಗಧಾರಣೆಯಾಗಿರುವುದಿಲ್ಲ, ನೇರವಾಗಿ ದೀಕ್ಷೆಯಾಗುವುದು, ನಿಶ್ಚಯ ಮಾಡದಿದ್ದರೂ ಲಗ್ನಕಾರ್ಯ ನೇರವೇರಿಸಿದಂತೆ ಇದು. ಆದ್ದರಿಂದ ಲಿಂಗದೀಕ್ಷೆಯೇ ಹೆಚ್ಚು ಮಹತ್ವಪೂರ್ಣ.)

ದೀಕ್ಷೆಯಲ್ಲಿ ಸದ್ಗುರುವು ಮೂರು ವಿಧ ಕ್ರಿಯೆಯಿಂದ ಅನುಗ್ರಹಿಸುವನು. ಅವೆಂದರೆ ವೇಧಾ, ಮಂತ್ರ ಮತ್ತು ಕ್ರಿಯೆಯ ಮೂಲಕ. ಶಿಷ್ಯನ ಮಸ್ತಕದ ಮೇಲೆ ತನ್ನ ಹಸ್ತವನ್ನಿಟ್ಟು ತನ್ನ ತಪಃಶಕ್ತಿಯನ್ನು ಅವತೀರ್ಣಗೊಳಿಸುವುದು ವೇಧಾ ದೀಕ್ಷೆ; ಮಂತ್ರವನ್ನು ಕಿವಿಯಲ್ಲಿ ಉಸುರುವುದು ಮಂತ್ರದೀಕ್ಷೆ, ಇಷ್ಟಲಿಂಗಕ್ಕೆ ಚಿತ್ಕಳೆ ತುಂಬಿ ಅದನ್ನು ಶಿಷ್ಯನಿಗೆ ಕೊಡುವುದು ಕ್ರಿಯಾದೀಕ್ಷೆ. ಶ್ರೀಗುರುಲಿಂಗದೇವರು ಅಕ್ಕನವರ ಗುರು. ಅವರು ತಮ್ಮ ಹಸ್ತವ ತಂದು ಮಸ್ತಕದ ಮೇಲೆ ಇರಿಸಿದಾಗ ತನ್ನ ಭವ ಹರಿದು ಹೋಯಿತು ಎಂದು ಅಕ್ಕನವರು ಹೇಳುತ್ತಾರೆ.

"ಎನ್ನ ತನ್ನಂತೆ ಮಾಡಿದ" ಎಂಬ ಮಾತು ಬಹಳ ಮಹತ್ವಪೂರ್ಣವಾದುದು ಮತ್ತು ಬಹುಬಗೆಯ ಆಯಾಮ ಉಳ್ಳದ್ದು. ಇದರಲ್ಲಿ ಗುರು ಮುಟ್ಟಿ ಗುರುವಾಗುವ ತತ್ವವಿದೆ. ವೈದಿಕ ಹಿಂದು ಧರ್ಮಕ್ಕೂ ಲಿಂಗಾಯತಕ್ಕೂ ಇಲ್ಲಿ ಪ್ರಮುಖ ವ್ಯತ್ಯಾಸವಿದೆ. "ವರ್ಣಾನಾಂ

ಬ್ರಾಹ್ಮಣೋ ಗುರುಃ." ಚತುರ್ವರ್ಣಗಳಲ್ಲಿ ಬ್ರಾಹ್ಮಣನು ಗುರು. ಅವನು ಪರುಷದಂತೆ ಕ್ಷತ್ರಿಯ, ವೈಶ್ಯರು ಕಬ್ಬಿಣದಂತೆ. ಪರುಷವು ಕಬ್ಬಿಣವನ್ನು ಮುಟ್ಟಿದಾಗ ಅದು ಚಿನ್ನವಾಗುವುದೇ ವಿನಾ ಪರುಷವಾಗದು. ಹಾಗೆ ಬ್ರಾಹ್ಮಣನೆಂಬ ಪರುಷ ದ್ವಿಜ ದೀಕ್ಷೆಯನ್ನು ನೀಡಿದಾಗ ಕ್ಷತ್ರಿಯ, ವೈಶ್ಯರು ಭಕ್ತರಾಗಬಲ್ಲರೇ ವಿನಾ ಗುರುವಾಗಲಾರರು. ಇನ್ನು ಶೂದ್ರರು ಹೆಂಚಿನಂತೆ ಪರುಷ ಮುಟ್ಟಿದರೂ ಹೊನ್ನಾಗಲಾರರು. ಆದ್ದರಿಂದ ಶೂದ್ರರು ಸಂಸ್ಕಾರಕ್ಕೆ ಅನರ್ಹರು ಅದಕ್ಕಾಗಿ ವೈದಿಕ ಶಾಸ್ತ್ರಗಳ ಪ್ರಕಾರ ಶೂದ್ರರಿಗೆ ದ್ವಿಜದೀಕ್ಷೆ ಇಲ್ಲ.

ಈ ಉದಾಹರಣೆಯನ್ನು ಲಿಂಗಾಯತ ಧರ್ಮ ನಿರಾಕರಿಸುತ್ತದೆ. ಗುರುವು ಪರುಷದಂತಲ್ಲ; ಜ್ಯೋತಿಯಂತೆ! ಪರುಷವು ಕಬ್ಬಿಣವನ್ನು ತನ್ನಂತೆ ಮಾಡಿಕೊಳ್ಳದು. ಆದರೆ ಜ್ಯೋತಿ ಇನ್ನೊಂದು ಜ್ಯೋತಿಯನ್ನು ಹಚ್ಚಿ ತನ್ನಂತೆ ಮಾಡಿಕೊಳ್ಳುತ್ತದೆ. ಗುರುವು ಅನುಗ್ರಹಿಸಿದಾಗ ಶಿಷ್ಯ(ಭಕ್ತ)ನು ಸಹ ಗುರುವಾಗಬಲ್ಲನು.

ಗುರು ಲಿಂಗದೇವರು ತಮ್ಮ ಕರಸ್ಥಲದಲ್ಲಿದ್ದ ಇಷ್ಟಲಿಂಗವನ್ನು ದೃಷ್ಟಿಸಿ ನೋಡಿ ಅದಕ್ಕೆ ಚಿತ್ಕಳೆ ತುಂಬಿ ಅಕ್ಕನವರ ಅಂಗೈಯಲ್ಲಿ ಇಟ್ಟರು. ಕೇವಲ ಬಹಿರಂಗದ ಕುರುಹನ್ನು ಪೂಜಿಸಿದರೆ ಸಾಲದು ಅದರ ಹಿಂದಿನ ಮರ್ಮವನ್ನು ಅರಿಯಬೇಕು; ಅದರ ಹಿಂದಿನ ಸ್ವರೂಪವನ್ನು ಚಿಂತಿಸಬೇಕು ಎಂದು ಹೇಳಿ ಮನಸ್ಥಲದಲ್ಲಿ ಅಳವಡಿಸಿದರು. ಮನಸ್ಥಲದಲ್ಲಿ ಪ್ರಾಣಲಿಂಗವಾಗಿ ಇರುವ ದೇವನು ಬ್ರಹ್ಮಾಂಡಗತನಾಗಿ ಇರುವುದರಿಂದ ಅಂಥ ದೇವನನ್ನು ಭಾವೇಂದ್ರಿಯದಿಂದ ಮಾತ್ರ ಅನುಭವಿಸಲು ಸಾಧ್ಯ ಎಂದು ಭಾವಸ್ಥಲದಲ್ಲಿ ಅಳವಡಿಸಿದರು. ಪರಮಾತ್ಮನನ್ನು ಭಾವದಿಂದ ಅನುಭವಿಸಿ ಸುಜ್ಞಾನದಿಂದ ಅರಿಯಬೇಕೆಂದು ಜ್ಞಾನಾಂಗದಲ್ಲಿ ಅಳವಡಿಸಿದರು. ಸುಜ್ಞಾನದಿಂದ ಅರಿತ ಮಹಾಲಿಂಗವನ್ನು ಸರ್ವಾಂಗದಲ್ಲೂ ಅಳವಡಿಸಿಕೊಳ್ಳಬೇಕು ಎಂಬುದನ್ನು ಮನವರಿಕೆ ಮಾಡಿ ಲಿಂಗದೇವನ ಕಾರುಣ್ಯವನ್ನು ಸರ್ವಾಂಗದಲ್ಲೂ ಅವತೀರ್ಣಗೊಳಿಸಿದ ಎಂದು ಅಕ್ಕನವರು ತಮ್ಮ ದೀಕ್ಷಾನುಭವವನ್ನು ಈ ವಚನದಲ್ಲಿ ವಿವರಿಸಿದ್ದಾರೆ.

3. ಪೂರ್ವಾಶ್ರಯ ನಿವೃತ್ತಿ

ಸಂಸಾರ ಸಂಗದಲ್ಲಿರ್ದೆ ನೋಡಾ ನಾನು;
ಸಂಸಾರ ನಿಸ್ಸಾರವೆಂದು ತೋರಿದನೆನಗೆ ಶ್ರೀಗುರು
ಅಂಗವಿಕಾರದ ಸಂಗವ ನಿಲಿಸಿ,
ಲಿಂಗವನಂಗದ ಮೇಲೆ ಸ್ಥಾಪ್ಯವ ಮಾಡಿದನೆನ್ನ ಗುರು;
ಹಿಂದಣ ಜನ್ಮವ ತೊಡೆದು, ಮುಂದಣ ಪಥವ ತೋರಿದನೆನ್ನ ತಂದೆ;
ಚೆನ್ನಮಲ್ಲಿಕಾರ್ಜುನನ (ಮಹಾದೇವಿಯಕ್ಕ ಪ್ರಿಯ ಲಿಂಗದೇವನ)
ನಿಜವ ತೋರಿದನೆನ್ನ ಗುರು.

ಹೆಂಡತಿ ಮಕ್ಕಳು ಇರುವುದೇ ಸಂಸಾರವಲ್ಲ. ನಾನು ನನ್ನದು ನನ್ನಿಂದ ನನಗೆ ನನಗಾಗಿ ಎಂಬ ನಾನಿನ ಸರಪಳಿಯೇ ಸಂಸಾರ. (ಅಕ್ಕನವರು ಗಂಡ–ಮಕ್ಕಳು ಎಂಬ ಸಂಸಾರ ಕಟ್ಟಿಕೊಳ್ಳಲಿಲ್ಲ. ನಾನು ನನ್ನದು ಎಂಬ ಅಹಂಮ್ಮಿನ ಸಂಸಾರ ಜಾಲದಲ್ಲೂ ಸಿಕ್ಕಿಕೊಳ್ಳಲಿಲ್ಲ. ಸುಮ್ಮನೆ ಸಾಂಪ್ರದಾಯಿಕವಾಗಿ ಹೀಗೆ ಸಂಸಾರ ಸಂಗದಲ್ಲಿರ್ದೆ ಎಂದು ಬರೆಯುತ್ತಾರೆ) ಅಂಥ ಸಂಸಾರ ಸಂಗದಲ್ಲಿ ನಾನಿದ್ದೆ. ನಾನು ನನ್ನದು ಎಂಬ ಸಂಸಾರ ಮುಖಿಯಾದ ಭ್ರಮೆ

ಬಿಡಿಸಿ ನೀನು, ಎಲ್ಲವೂ ನಿನ್ನದು ಎಂದು ದೇವಮುಖಿಯನ್ನಾಗಿ ಗುರುವು ಮಾಡಿದನು, ಈ ಸಂಸಾರ ನಿಸ್ಸಾರ, ಅರ್ಥರಹಿತ ಎಂದು ಮನವರಿಕೆ ಮಾಡಿಕೊಟ್ಟ. ತಾಯಿ ತಂದೆ ಬಂಧು ಬಳಗ ಈ ಸಂಬಂಧಗಳೆಲ್ಲ ಕ್ಷಣಿಕ, ಅಶಾಶ್ವತ ಎಂದು ತೋರಿಸಿಕೊಟ್ಟ. ಶರೀರದ ಗುಣಗಳಾದ ಹಸಿವು–ತೃಷೆ–ನಿದ್ರೆ–ವಿಷಯ–ಮೈಥುನ–ಬಯಕೆ ಎಂಬ ಷಡ್ವಿಕಾರಗಳನ್ನು ನಿಲ್ಲಿಸಿ ಇಷ್ಟಲಿಂಗವನ್ನು ಅಂಗೈ ನೀಡಿ, ಅಂಗಕ್ಕೆ ಧರಿಸಿ ಲಿಂಗದೇವನ ಕಡೆಗೆ ಗಮನ ಹರಿಯುವಂತೆ ಮಾಡಿದ. ಹಿಂದಿನಿಂದ ಬಂದಿದ್ದ ಆಚಾರ–ವಿಚಾರ– ಸಂಪ್ರದಾಯಗಳನ್ನು ನಿವೃತ್ತಿ ಮಾಡಿ ಹೊಸ ಪಥವನ್ನು ತೋರಿಸಿ ಕೊಟ್ಟ ಎನ್ನ ಗುರುವು. ಲಿಂಗದೇವನ ನಿಜ ಸ್ವರೂಪವನ್ನು ತಿಳಿಸಿಕೊಟ್ಟ ಶ್ರೀಗುರುವು ನನ್ನ ಜನ್ಮವನ್ನು ಧನ್ಯ ಮಾಡಿದನು.

4. ದೇವ ಕರುಣೆ

ನೀನು ಹೋಗೆಂದಡೆ ಹೋದೆನಯ್ಯಾ
ನೀನು ಹುಟ್ಟೆಂದಡೆ ಹುಟ್ಟಿದೆನಯ್ಯಾ
ನೀನು ಬೆಳೆಯೆಂದ ಠಾವಿನಲ್ಲಿ ಬೆಳೆದೆನಯ್ಯಾ
ನೀನು ಹಿಡಿಯೆಂದವರ ಮನೆಯ ಹೊಕ್ಕೆನಯ್ಯಾ
ನಿಮ್ಮ ಬೆಸಲಾದ ಮಗಳಾಗಿರ್ದೆ ಕಾಣಾ
ಚನ್ನಮಲ್ಲಿಕಾರ್ಜುನಾ, (ಮಹಾದೇವಿಯಕ್ಕ ಪ್ರಿಯ ಲಿಂಗದೇವ).

"ದೇವಾ, ನಾನು ನಿನ್ನ ಕೈಯೊಳಗಣ ಸೂತ್ರದ ಬೊಂಬೆ. ನಿನ್ನ ಪ್ರೇರಣೆಯಂತೆಯೇ ನನ್ನ ನಡೆ, ನುಡಿ, ವ್ಯವಹಾರವೆಲ್ಲ. ನೀನು ಹೋಗು ಎಂದ ಕಡೆ ನಾನು ಹೋಗಿದ್ದೇನೆ. ನಿನ್ನ ಇಚ್ಛೆಯಂತೆ ನಾನು ಹುಟ್ಟಿದ್ದೇನೆ. ಯಾವ ತಾಯಿತಂದೆಗಳಲ್ಲಿ ನಾನು ಹುಟ್ಟಬೇಕು, ಬೆಳೆಯಬೇಕು ಅದರಂತೆ ನಾನು ಹುಟ್ಟಿ ಬೆಳೆದಿದ್ದೇನೆ. (ಮನೆಯನ್ನು ತೊರೆದು ಸಾಗುವಾಗ) ನಿನ್ನ ಪ್ರೇರಣೆಯಿಂದ ಆಶ್ರಯಿಸು ಎಂದು ಹೇಳಿದವರ ಮನೆಯನ್ನು ಹೊಕ್ಕಿದ್ದೇನೆ. ಅವರ ಮನೆಗಳಲ್ಲಿ ಬಗೆಬಗೆಯ ಕೆಲಸವನ್ನು ಮಾಡಿದುದೂ ನಿನ್ನ ಸಂಕಲ್ಪವಂತೆಯೆ. ಹೀಗಾಗಿ ನಿಮಗೆ ನಾನು ಪ್ರೀತಿಪಾತ್ರಳಾದ ಮಗಳಾಗಿದ್ದೇನೆ.

ಎಷ್ಟೋ ಜನ ಮಹಾತ್ಮರು ಜನರು ಗುರುತಿಸಲ್ಪಡುವ ಮೊದಲು ಶ್ರೀಮಂತರ ಮನೆಗಳಲ್ಲಿ ಕಾಯಕ ಮಾಡಿದ್ದುಂಟು. ಅದೇ ರೀತಿ ಅಕ್ಕನವರು ಸಹ ಮಾಡಿರಬಹುದು ಎಂಬುದು ಈ ವಚನದಿಂದ ಕಾಣಬರುತ್ತದೆ.

5. ದೀಕ್ಷಾವಿಧಿ

ಸದ್ಗುರು ಸ್ವಾಮಿ ಶಿಷ್ಯಂಗೆ ಅನುಗ್ರಹವ ಮಾಡುವಲ್ಲಿ
ತಚ್ಛಿಷ್ಯನ ಮಸ್ತಕದ ಮೇಲೆ ತನ್ನ ಹಸ್ತವನಿರಿಸಿದಡೆ
ಲೋಹದ ಮೇಲೆ ಪರುಷ ಬಿದ್ದಂತಾಯಿತ್ತಯ್ಯಾ
ಒಪ್ಪುವ ಶ್ರೀ ವಿಭೂತಿಯ ನೊಸಲಿಂಗೆ ಪಟ್ಟವ ಕಟ್ಟಿದಡೆ
ಮುಕ್ತಿರಾಜ್ಯದ ಒಡೆತನಕ್ಕೆ ಪಟ್ಟವ ಕಟ್ಟಿದಂತಾಯಿತಯ್ಯಾ
ಸದ್ಯೋಜಾತ ವಾಮದೇವ ಅಘೋರ ತತ್ಪುರುಷ ಈಶಾನವೆಂಬ
ಪಂಚಕಳಶದಭಿಷೇಕವ ಮಾಡಿಸಲು
ಶಿವನ ಕರುಣಾಮೃತದ ಸೋನೆ ಸುರಿದಂತಾಯಿತ್ತಯ್ಯಾ

ನೆರೆದ ಶಿವಗಣಂಗಳ ಮಧ್ಯದಲ್ಲಿ
ಮಹಾಲಿಂಗವನು ಕರತಳಾಮಳಕವಾಗಿ ಶಿಷ್ಯನ ಕರಸ್ಥಲಕ್ಕೆ ಇತ್ತು,
ಅಂಗದಲ್ಲಿ ಪ್ರತಿಷ್ಠಿಸಿ, ಪ್ರಣವ ಪಂಚಾಕ್ಷರಿಯುಪದೇಶವ
ಕರ್ಣದಲ್ಲಿ ಹೇಳಿ, ಕಂಕಣವ ಕಟ್ಟಿದಲ್ಲಿ,
ಕಾಯವೇ ಕೈಲಾಸವಾಯಿತ್ತು.
ಪ್ರಾಣವೆ ಪಂಚಬ್ರಹ್ಮಮಯ ಲಿಂಗವಾಯಿತ್ತು.
ಇಂತು ಮುಂದ ತೋರಿ ಹಿಂದ ಬಿಡಿಸಿದ
ಶ್ರೀಗುರುವಿನ ಸಾನಿಧ್ಯದಿಂದಾನು ಬದುಕಿದೆನಯ್ಯಾ
ಚನ್ನಮಲ್ಲಿಕಾರ್ಜುನಾ, (ಮಹಾದೇವಿಯಕ್ಕ ಪ್ರಿಯ ಲಿಂಗದೇವ)

ಸತ್ಯ-ಸದಾಚಾರದಲ್ಲಿ ನಡೆಯುವ ಗುರು ಸದ್ಗುರು. ಆತ ಶಿಷ್ಯಂಗೆ ಅನುಗ್ರಹಿಸುವ ವಿಧಾನವೆಂದರೆ ಶಿಷ್ಯನ ತಲೆಯ ಮೇಲೆ ಹಸ್ತವನ್ನು ಇರಿಸುವುದು. ತನ್ಮೂಲಕ ತನ್ನ ಅನುಗ್ರಹವನ್ನು ಇಳಿಸುವುದು. ಹಾಗೆ ಕೈಯನ್ನಿಟ್ಟಾಗ ಲೋಹದ ಮೇಲೆ ಪರುಷವು ಬಿದ್ದಂತೆ ಆಗಿ ಲೋಹವು ತನ್ನ ಗುಣಗಳನ್ನು ಕಳೆದುಕೊಂಡು ಚಿನ್ನವಾದಂತೆ ವ್ಯಕ್ತಿಯು ಭವಿತ್ವವನ್ನು ಕಳೆದುಕೊಂಡು ಭಕ್ತನಾಗುವನು. ನಂತರ ಗುರುವು ಹಣೆಗೆ ಮೂರು ಎಳೆ ವಿಭೂತಿಯನ್ನು ಧರಿಸುವನು. ಇದು ಮುಕ್ತಿರಾಜ್ಯದ ಒಡೆತನಕ್ಕೆ ಪಟ್ಟವ ಕಟ್ಟಿದಂತೆ. ಪರಮಾತ್ಮನಿಗೆ 5 ಮುಖಗಳು. ಅವೆಂದರೆ ಸದ್ಯೋಜಾತ, ವಾಮದೇವ, ಅಘೋರ, ತತ್ಪುರುಷ ಈಶಾನವೆಂಬುವು. ಇವು ಪರಮಾತ್ಮನ ಸ್ವರೂಪವನ್ನು ಸಂಕೇತಿಸುತ್ತವೆ. ಸತ್-ಚಿತ್-ಆನಂದ-ನಿತ್ಯ-ಪರಿಪೂರ್ಣ ಎಂಬ ಐದು ದೇವನ ಲಕ್ಷಣಗಳು. ಹಾಗೆಯೇ ಅವನ ಕರ್ತವ್ಯಗಳಾದ ಸೃಷ್ಟಿ-ಸ್ಥಿತಿ-ಲಯ-ಅನುಗ್ರಹ-ತಿರೋಧಾನ ಎಂಬುವನ್ನೂ ಸಂಕೇತಿಸುತ್ತವೆ. ಈ ಐದರ ಪ್ರತೀಕವಾಗಿ 5 ಕಲಶಗಳನ್ನಿಟ್ಟು ಅವುಗಳ ನೀರನ್ನು ತಲೆಯ ಮೇಲೆ ಸಿಂಪಡಿಸಲಾಗುವುದು. ಇದು ಶಿವನ ಕರುಣಾಮೃತದ ಮಳೆ ಸುರಿದಂತೆ ಆಗುವುದು. ಸಮಾವೇಶವಾದ ಶರಣರ ಸಮ್ಮುಖದಲ್ಲಿ ಇಷ್ಟಲಿಂಗಕ್ಕೆ ಚಿತ್ಕಳೆ ತುಂಬಿ ಶಿಷ್ಯನ ಕರಸ್ಥಲಕ್ಕೆ ಗುರುವು ಇಡುವನು. ನಂತರ ಅದನ್ನು ಶರೀರದ ಮೇಲೆ ಪ್ರತಿಷ್ಠಾಪಿಸುವನು. ಕಿವಿಯಲ್ಲಿ ಪ್ರಣವ ಪಂಚಾಕ್ಷರಿ ಮಂತ್ರವನ್ನು ಹೇಳುವನು. ಕೈಗೆ ರುದ್ರಾಕ್ಷಿ ಕಂಕಣವನ್ನು ಕಟ್ಟುವನು. ಆಗ ಶರೀರವೇ ಕೈಲಾಸ -ದೇವರ ವಾಸಸ್ಥಾನವಾಯಿತು. ಪ್ರಾಣವೂ ದೈವೀಕರಣಗೊಂಡಿತು. "ಹೀಗೆ ಹೊಸ ಬದುಕನ್ನು ಕೊಟ್ಟು ಹೊಸಪಥವನ್ನು ತೋರಿ, ಹಿಂದಿನ ದಾರಿಯನ್ನು ಬಿಡಿಸಿದ ಗುರುವಿನ ಸಾನಿಧ್ಯದಿಂದ ನಾನು ಬದುಕಿದೆನು." ಎಂದು ಅಕ್ಕನವರು ವಿವರಿಸುತ್ತಾರೆ.

6. ಸದ್ಗುರುವಿನ ಕ್ರಿಯೆ

ಒಳಗೆ ಶೋಧಿಸಿ, ಹೊರಗೆ ಶುದ್ಧಯಿಸಿ
ಒಳಹೊರಗೆಂಬ ಉಭಯ ಶಂಕೆಯ ಕಳೆದು,
ಸ್ಫಟಿಕದ ಶಲಾಕೆಯಂತೆ ತಳವೆಳಗು ಮಾಡಿ
ಸುಕ್ಷೇತ್ರವನರಿದು ಬೀಜವ ಬಿತ್ತುವಂತೆ
ಶಿಷ್ಯನ ಸರ್ವ ಪ್ರಪಂಚ ನಿವೃತ್ತಿಯಂ ಮಾಡಿ ನಿಜೋಪದೇಶವನಿತ್ತು.
ಆ ಶಿಷ್ಯನ ನಿಜದಾದಿಯನೈದಿಸುವನೀಗ ಜ್ಞಾನಗುರು

ಆ ಸಹಜ ಗುರುವೀಗ ಜಗದಾರಾಧ್ಯನು,
ಅವನ ಶ್ರೀ ಪಾದಕ್ಕೆ ನಮೋ ನಮೋ ಎಂಬೆ
ಕಾಣಾ ಚನ್ನಮಲ್ಲಿಕಾರ್ಜುನಾ, (ಮಹಾದೇವಿಯಕ್ಕ ಪ್ರಿಯ ಲಿಂಗದೇವ)

ಅಧ್ಯಾತ್ಮ ಜೀವಿಯ ಮೊದಲನೆ ಕೆಲಸ ಅಂತರಂಗವನ್ನು ಶೋಧಿಸಿಕೊಳ್ಳುವುದು. ಬಹುಪಾಲು ಜನರು ತಮ್ಮ ಅಂತರಂಗದ ಆತ್ಮನಿರೀಕ್ಷಣೆ (*Self - introspection*) ಮಾಡಿಕೊಳ್ಳದೆ ಇನ್ನೊಬ್ಬರ ತಪ್ಪನ್ನು ಹುಡುಕಲು ಹೋಗುವರು. ಸಾಧಕನು ಮೊದಲು ತನ್ನ ಒಳಗನ್ನು ಶೋಧಿಸುವನು. ಗುರುವು ಕಲಿಸುವುದು ಈ ಆತ್ಮನಿರೀಕ್ಷಣೆಯ ಕಾರ್ಯವನ್ನು. ನಂತರ ಆಚಾರವನ್ನು ಕಲಿಸಿ ಹೊರಗನ್ನು ಅಂದರೆ ಬಹಿರಂಗವನ್ನು ಶುದ್ಧೀಕರಿಸುವನು. ಶೌಚ, ಸ್ನಾನ, ಸ್ವಚ್ಛತೆ ಮುಂತಾದವು ಆಚಾರಕ್ಕೆ ಸಂಬಂಧಿಸಿದವು. ಇವುಗಳಿಂದ ಶರೀರದ ಹೊರಮುಖ ಶುದ್ಧವಾಗುವುದು. ಸಾಧಕನು ಒಳ-ಹೊರಗೆ ಒಂದಾಗಿರಬೇಕು. ಬಹಿರಂಗದಲ್ಲಿ ಸಂಭಾವಿತನಂತೆ ವರ್ತಿಸಿ ಅಂತರಂಗದಲ್ಲಿ ವಿಕಾರಿಯಾಗಿ ಇರಬಾರದು. ಸುಜ್ಞಾನದ ಬೋಧೆಯನ್ನು ಮಾಡಿ ಶ್ರೀಗುರುವು ಸ್ಫಟಿಕದ ಶಲಾಕೆಯು ಪಾರದರ್ಶಕವಾಗಿ ಒಳಗೂ-ಹೊರಗೂ ಒಂದೇಯಾಗಿರುವಂತೆ ಶಿಷ್ಯನನ್ನು ತರಬೇತಿಗೊಳಿಸುವನು. ಉತ್ತಮ ರೈತನು ಭೂಮಿಯನ್ನು ಹಸನು ಮಾಡಿ, ಸೂಕ್ತ ಸಮಯವನ್ನು ಅರಿತು ಬೀಜವನ್ನು ಬಿತ್ತುವಂತೆ ಶಿಷ್ಯನ ಸರ್ವಪ್ರಪಂಚವ ನಿವೃತ್ತಿ ಮಾಡಿ ನಿಜೋಪದೇಶದ ಬೀಜವನ್ನು ಬಿತ್ತುವನು. ಶಿಷ್ಯನನ್ನು ಸನ್ಮಾರ್ಗದಲ್ಲಿ ಕೊಂಡು ಒಯ್ದು, ನಿಜವಾದ ಗುರಿಯನ್ನು ಮುಟ್ಟಿಸಬಲ್ಲವನು ಜ್ಞಾನಗುರು. ಅಂಥವನು ಲೋಕದಲ್ಲಿ ಪೂಜ್ಯನು. ಅಂಥ ಸದ್ಗುರುವಿನ ಪಾದಕ್ಕೆ ನಮೋ ನಮೋ ಎಂದು ನಮಿಸುತ್ತೇನೆ."

7. ವಿಭೂತಿಯ ಮಹಿಮೆ

ಒಪ್ಪುವ ವಿಭೂತಿಯ ನೊಸಲಲ್ಲಿ ಧರಿಸಿ
ದೃಷ್ಟಿಯಾರೆ ನಿಮ್ಮ ನೋಡಲೊಡನೆ
ಬೆಟ್ಟದಷ್ಟು ತಪ್ಪುಳ್ಳಡೆಯೂ ಮುಟ್ಟಲಮ್ಮವು ನೋಡಾ.
ದುರಿತ ಅನ್ಯಾಯವ ಪರಿಹರಿಸಬಲ್ಲಡೆ
'ಓಂ ನಮಃ ಶಿವಾಯ' ಶರಣೆಂಬುದೆ ಮಂತ್ರ
ಅದೆಂತೆಂದಡೆ:
"ನಮಃ ಶಿವಾಯೇತಿ ಮಂತ್ರಂ ಯಃ ಕರೋತಿ ತ್ರಿಪುಂಡ್ರಕಂ
ಸಪ್ತಜನ್ಮಕೃತಂ ಪಾಪಂ ತತ್‌ಕ್ಷಣಾದೇವ ನಶ್ಯತಿ"
ಇಂತೆಂದುದಾಗಿ, ಸಿಂಹದ ಮರಿಯ ಸೀಳ್ನಾಯಿ ತಿಂಬಡೆ
ಭಂಗವಿನ್ನಾರದೋ ಚೆನ್ನಮಲ್ಲಿಕಾರ್ಜುನಾ, (ಮಹಾದೇವಿಯಕ್ಕ ಪ್ರಿಯ ಲಿಂಗದೇವ)

'ಒಪ್ಪುವ ವಿಭೂತಿ' ಎಂದು ಅಕ್ಕನವರು ಬಳಸುತ್ತಾರೆ. ಏಕೆಂದರೆ ಹಣೆಯ ಮೇಲೆ ಧರಿಸುವ ಮೂರು ಎಳೆಯ ವಿಭೂತಿ ಮತ್ತು ಭ್ರೂಮಧ್ಯದಲ್ಲಿಡುವ ವಿಭೂತಿ ಬೊಟ್ಟು ಮುಖದ ಸೌಂದರ್ಯವನ್ನು ಹೆಚ್ಚಿಸುತ್ತವೆಯೇ ವಿನಾ ಅಂದಗೆಡಿಸುವುದಿಲ್ಲ. ಜೊತೆಗೆ ಸಾತ್ವಿಕ ಸ್ವರೂಪವನ್ನು ನೀಡುತ್ತದೆ. ವಿಭೂತಿಯನ್ನು ಧರಿಸಿ, ನೆಟ್ಟ ದೃಷ್ಟಿಯಿಂದ ಇಷ್ಟಲಿಂಗವನ್ನು ನೋಡಿದರೆ ಬೆಟ್ಟದಷ್ಟು ತಪ್ಪನ್ನು ಮಾಡಿದ್ದರೂ ಅವು ಪಾಪವನ್ನು ಉಂಟು ಮಾಡುವುದಿಲ್ಲ. (ವಿಭೂತಿ ಮಹಿಮೆಯನ್ನು ಹೇಳುವ ಭರದಲ್ಲಿ ಹೀಗೆ ಹೇಳುವರಾದರೂ ಶರಣರ ದೃಷ್ಟಿಕೋನ ಹೀಗಿಲ್ಲ. ಏಕೆಂದರೆ ವಿಭೂತಿ ಧರಿಸಿ, ಲಿಂಗಪೂಜೆ ಮಾಡಿದರೆ ಎಂಥ ತಪ್ಪು ಮಾಡಿದರೂ

ಅವು ಪಾಪವನ್ನು ಉಂಟು ಮಾಡುವುದಿಲ್ಲ ಎಂದರೆ ತಪ್ಪು ಮಾಡುವವರಿಗೆ ಬಹಳ ಖುಷಿಯಾಗುವುದು. ಪೂಜೆ ಮಾಡುವುದು ಆಧ್ಯಾತ್ಮಿಕ ಆನಂದಕ್ಕಾಗಿ, ಪಾಪ–ಪುಣ್ಯ ನೈತಿಕ ಸಮಸ್ಯೆ. ಪೂಜೆಯಿಂದ ಪಾಪವನ್ನು ಪರಿಹರಿಸಿಕೊಳ್ಳಲು ಬರುವುದಿಲ್ಲ.)

ಕಷ್ಟ ಕಾರ್ಪಣ್ಯಗಳನ್ನು ಪರಿಹರಿಸಲು "ಓಂ ನಮಃ ಶಿವಾಯ" ಎಂದು ದೇವರಿಗೆ ಶರಣಾಗುವುದೇ ಸಾಧನೆ. ಶಿವ ಪುರಾಣದಲ್ಲಿ ಹೇಳಲಾಗುವುದು, 'ನಮಃ ಶಿವಾಯ ಎಂಬ ಮಂತ್ರೋಚ್ಚಾರ ವಿಭೂತಿ ಧಾರಣೆ. ಇವುಗಳಿಂದ ಏಳುಜನ್ಮಗಳಲ್ಲಿ ಮಾಡಿದ ಪಾಪ ಕ್ಷಣಾರ್ಧದಲ್ಲಿ ನಶಿಸಿ ಹೋಗುತ್ತದೆ ಎಂದು. ಸಿಂಹದ ಮರಿ ಎಷ್ಟೇ ಸಣ್ಣದಿದ್ದರೂ ನಾಯಿ ಅದನ್ನು ತಿನ್ನಲಾರದು. ಅದೇ ರೀತಿ ಮಂತ್ರಜಪ ಮಾಡುವ ಶರಣನನ್ನು ಕಷ್ಟಕಾರ್ಪಣ್ಯ ಕಾಡಲಾರವು.

8. ಆತ್ಮಘಾತ ಪಾಪಕರ

ಶಿವ ಶಿವಾ, ಶ್ರೀಗುರು ಲಿಂಗದೇವರು ತನ್ನ ಹಸ್ತವ ತಂದು
ಎನ್ನ ಶಿರಸ್ಥಲದ ಮೇಲಿರಿಸಿದ ಬಳಿಕ
ಎನ್ನ ಭವಂ ನಾಸ್ತಿಯಾಯಿತ್ತು
ಎನ್ನ ತನ್ನಂತೆ ಮಾಡಿದ, ತನ್ನ ಎನ್ನಂತೆ ಮಾಡಿದ;
ಎನ್ನಲ್ಲಿ ತನ್ನಲ್ಲಿ ತೆರಹಿಲ್ಲದೆ ಮನಕ್ಕೆ ತೋರಿದ.
ತನ್ನ ಕರಸ್ಥಲದೊಳಗಿದ್ದ ಲಿಂಗದೇವರನು
ಎನ್ನ ಕರಸ್ಥಲದೊಳಗೆ ಮೂರ್ತಿಗೊಳಿಸಿದ.
ಎನ್ನ ಕರಸ್ಥಲದೊಳಗಿದ್ದ ಲಿಂಗದೇವರನು
ಎನ್ನ ತನುವಿನ ಮೇಲೆ ಮೂರ್ತಿಗೊಳಿಸಿದ.
ಎನ್ನ ತನುವಿನ ಮೇಲಣ ಲಿಂಗದೇವರನು
ಎನ್ನ ಮನವೆಂಬ ಮಂಟಪದೊಳಗೆ ಮೂರ್ತಿಗೊಳಿಸಿದ.
ಎನ್ನ ಮನವೆಂಬ ಮಂಟಪದೊಳಗೆ ಮೂರ್ತಿಗೊಳಿಸಿದ ಲಿಂಗದೇವರನು,
ಎನ್ನ ಜ್ಞಾನವೆಂಬ ಮಂಟಪದೊಳಗೆ ಮೂರ್ತಿಗೊಳಿಸಿದ.
ಎನ್ನ ಜ್ಞಾನವೆಂಬ ಮಂಟಪದೊಳಗಣ ಲಿಂಗದೇವರನು
ಮಹಾಘನದಲ್ಲಿ ಮೂರ್ತಿಗೊಳಿಸಿದ.
ಕಬ್ಬಿನ ತನಿರಸವ ಕೊಂಡು ಸಿಪ್ಪೆಯ ಬಿಡುವಂತೆ,
ಮನದ ಮೇಲಣ ಲಿಂಗದೇವರಿರಲು
ತನುವಿನ ಮೇಲಣ ಲಿಂಗದೇವರು ಹೋಯಿತ್ತೆಂದು
ಆತ್ಮಘಾತವ ಮಾಡಿಕೊಂಬ ಬ್ರಹ್ಮೇತಿ ಸೂನೆಗಾರರ ನೋಡಯ್ಯಾ
ಚನ್ನಮಲ್ಲಿಕಾರ್ಜುನಾ, (ಮಹಾದೇವಿಯಕ್ಕ ಪ್ರಿಯ ಲಿಂಗದೇವ)

ಶ್ರೀಗುರು ಲಿಂಗದೇವರು ಶಿವ ಶಿವಾ, ತಮ್ಮ ಹಸ್ತವನ್ನು ತಂದು ಎನ್ನ ಶಿರದ ಮೇಲೆ ಇರಿಸಿದ ಬಳಿಕ ಎನ್ನ ಭವವು ನಾಶವಾಯಿತು. ಎನ್ನನ್ನು ತನ್ನಂತೆ ಮಾಡಿಕೊಂಡರು. ಶಿಷ್ಯನು ಗುರುವು ಮುಟ್ಟಿ ಗುರುವಾಗುತ್ತಾನೆ. ಇಬ್ಬರಲ್ಲಿ ವ್ಯತ್ಯಾಸವಿರದು ಎಂಬುದನ್ನು ಮನವರಿಕೆ ಮಾಡಿಕೊಟ್ಟರು. ತಮ್ಮ ಕರದಲ್ಲಿ ಇದ್ದ ಲಿಂಗದೇವರನ್ನು ನನ್ನ ಕರಸ್ಥಲಕ್ಕೆ ಕೊಟ್ಟರು. ನಂತರ ನನ್ನ ಕರದಲ್ಲಿದ್ದ ಲಿಂಗದೇವರನು ಶರೀರಕ್ಕೆ ಧಾರಣ ಮಾಡಿದರು. ನಂತರ ನನ್ನ ಮನಕ್ಕೆ

ಲಿಂಗಜ್ಞಾನವನ್ನು ನೀಡಿ ಲಿಂಗದೇವರನು ಜ್ಞಾನಮಂಟಪದಲ್ಲಿ ಅಳವಡಿಸಿದರು. ಇಷ್ಟಲಿಂಗದ ಮೂಲಕ ಲಿಂಗದೇವನ ದಿವ್ಯಜ್ಞಾನವನ್ನು ಪಡೆಯಬೇಕು. ಅವೆರಡರ ಸಂಬಂಧ ಕಬ್ಬಿನ ಸಿಪ್ಪೆ ಮತ್ತು ಒಳಗಣ ತನಿರಸದಂತೆ. ರಸಕ್ಕೆ ಸಿಪ್ಪೆ ಪೋಷಕ, ಸಿಪ್ಪೆಗೆ ರಸದಿಂದ ಮಹತ್ವ. ಆಕಸ್ಮಿಕವಾಗಿ ಏನಾದರೂ ಅವಗಡ ಸಂಭವಿಸಿ ಇಷ್ಟಲಿಂಗ ಕಳೆದುಹೋದರೆ, ಬಿದ್ದು ಹೋದರೆ ಆಗ ಕೆಲವರು ಪ್ರಾಣವನ್ನೇ ಕಳೆದುಕೊಳ್ಳುವರು. ಇದು ತಪ್ಪು ಇವನು ಕೊಲೆಗಾರನೇ ಅಹುದು. ಇಷ್ಟಲಿಂಗ ಸಿಕ್ಕರೆ ಅದನ್ನು ಗುರು–ಜಂಗಮರ ಕರುಣೋದಕದಿಂದ ಶುದ್ಧೀಕರಿಸಬೇಕು. ಸಿಕ್ಕದೆ ಕಳೆದೇಹೋದರೆ ಬೇರೆ ಇಷ್ಟಲಿಂಗವನ್ನು ಶುದ್ಧಿ ಮಾಡಿಸಿ ಕಟ್ಟಿಸಿಕೊಳ್ಳಬೇಕು.

9. ಮಾಯೆಯ ಉಪಟಳ

ಹರಿಯ ನುಂಗಿತ್ತು ಮಾಯೆ
ಅಜನ ನುಂಗಿತ್ತು ಮಾಯೆ;
ಇಂದ್ರನ ನುಂಗಿತ್ತು ಮಾಯೆ;
ಚಂದ್ರನ ನುಂಗಿತ್ತು ಮಾಯೆ,
ಬಲ್ಲೆನೆಂಬ ಬಲಗೈಯರ ನುಂಗಿತ್ತು ಮಾಯೆ,
ಅರಿಯೆನೆಂಬ ಅಜ್ಞಾನಿಗಳ ನುಂಗಿತ್ತು ಮಾಯೆ,
ಈರೇಳುಭುವನವನಾರಡಿಗೊಂಡಿತ್ತು ಮಾಯೆ,
ಚನ್ನಮಲ್ಲಿಕಾರ್ಜುನಯ್ಯಾ,(ಮಹಾದೇವಿಯಕ್ಕ ಪ್ರಿಯ ಲಿಂಗದೇವ)
ಎನ್ನ ಮಾಯವ ಮಾಣಿಸಾ ಕರುಣಿ.

ಮಾಯೆ ಎನ್ನುವುದು ಒಂದು ಬಗೆಯ ಭ್ರಮಾವರಣ. ಒಬ್ಬೊಬ್ಬರಿಗೆ ಒಂದು ರೀತಿ ಮಾಯೆ ಕಾಡುತ್ತಿರುತ್ತದೆ. ಹರಿ, ಬ್ರಹ್ಮ, ಇಂದ್ರ, ಚಂದ್ರ ಎಲ್ಲರನ್ನೂ ಈ ಮಾಯೆ ಕಾಡಿತು. ನಾನು ಬಹಳ ತಿಳಿದುಕೊಂಡಿದ್ದೇನೆ ಎಂಬ ಹಮ್ಮು ಹೊಂದಿರುವವರನ್ನು, ನಾವೇನೂ ಅರಿಯದ ಅಜ್ಞಾನಿಗಳು ಎಂಬ ಮರೆವಿನಲ್ಲಿ ಇರುವವರನ್ನು ಈ ಮಾಯೆ ಕಾಡುತ್ತದೆ. ಹದಿನಾಲ್ಕು ಲೋಕಗಳನ್ನು ಆರಡಿಯಲ್ಲಿ ಈ ಮಾಯೆ ಅಳೆಯುತ್ತದೆ. ಇಂಥ ಮಾಯೆಯ ಬಗ್ಗೆ ನನಗೆ ಅಂಜಿಕೆಯಾಗುವುದು. ದೇವಾ, ನನಗೆ ಆವರಿಸಿರುವ ಮಾಯೆಯನ್ನು ನಿವಾರಿಸುದೇವಾ.

10.ಮಾಯೆಯ ಲೀಲೆ

ಅಲ್ಲೆಂದಡೆ ಉಂಟೆಂಬುದೀ ಮಾಯೆ
ಒಲ್ಲೆನೆಂದಡೆ ಬಿಡದೀ ಮಾಯೆ; ಎನಗಿದು ವಿಧಿಯೆ!
ಚನ್ನಮಲ್ಲಿಕಾರ್ಜುನಯ್ಯಾ, (ಮಹಾದೇವಿಯಕ್ಕ ಪ್ರಿಯ ಲಿಂಗದೇವ)
ಒಪ್ಪಿ ಮರೆವೊಕ್ಕಡೆ ಮತ್ತುಂಟೆ?
ಕಾಯಯ್ಯ ಶಿವಧೋ!

ಮಾಯೆ ಒಂದು ವಸ್ತುನಿಷ್ಠ ಸತ್ಯ (Objective Reality)ವಲ್ಲ; ಇದು ಮನೋಗತ (Subjective Reality) ತತ್ವ, ಇದು ಸತ್ಯಕ್ಕೆ ವಿರುದ್ಧವಾಗಿ ನಡೆಯುವುದು. ಮನೋವಿಜ್ಞಾನದಲ್ಲಿ Id ಎಂದು ಕರೆಯಲಾಗುವುದು. ಬೌದ್ಧ ದರ್ಶನದಲ್ಲಿ ಬರುವ 'ಮಾರ' ಎಂಬ ಪರಿಕಲ್ಪನೆ ಹೋಲುವುದು. 'ಅಲ್ಲ' ಎಂದಡೆ 'ಉಂಟು' ಎಂಬುದೀ ಮಾಯೆ. ಉದಾಹರಣೆಗೆ

ಇಂದ್ರಿಯ ಸುಖವು ಶಾಶ್ವತವಲ್ಲ ಎಂದರೆ ಮಾಯೆ "ಇಲ್ಲ, ಇದೇ ಶಾಶ್ವತ" ಎನ್ನುತ್ತದೆ. ವಿವೇಕ ಜ್ಞಾನವನ್ನು ಹೊಂದಿದ ಸಾಧಕ "ನಾನು ಇದನ್ನು ಒಲ್ಲೆ" ಎಂದು ಯಾವುದನ್ನಾದರೂ ನಿರಾಕರಿಸಿದರೆ "ಇಲ್ಲ, ಅದನ್ನು ಸ್ವೀಕರಿಸು" ಎಂದು ಮಾಯೆ ಒತ್ತಾಯಿಸುತ್ತದೆ. ಮನಸ್ಸಿನಲ್ಲಿ ಹಲವಾರು ಪದರಗಳಿರುತ್ತದೆ. ಅಂತರಾತ್ಮ(Conseience)ವು ವಿವೇಕ ಜ್ಞಾನದಿಂದ ಕೂಡಿ ಒಳ್ಳೆಯದನ್ನೇ ಬೋಧಿಸುತ್ತಿದ್ದರೆ ಮನಸ್ಸಿನ ಒಂದು ಮೂಲೆಯಲ್ಲಿ ಹುದುಗಿರುವ ಮಾಯೆ ಕೆಟ್ಟದ್ದನ್ನೇ ಒತ್ತಿ ಹೇಳುತ್ತದೆ. ಅದೇ ಮಾಯೆ. ಅದರ ಬೋಧೆಗೆ ಬಲಿಯಾದವನೇ ದುರಾತ್ಮನಾಗುವನು. ಅಂತರಾತ್ಮದ ಬೋಧೆಗೆ ಕಿವಿಗೊಟ್ಟವನು "ಮಹಾತ್ಮ"ನಾಗುವನು. "ದೇವಾ, ನಿನ್ನ ಮರೆಹೊಕ್ಕಡೆ ಮಾಯೆಯ ಕಾಟವಿರದು. ರಕ್ಷಿಸು, ರಕ್ಷಿಸು." ಎಂದು ಅಕ್ಕನವರು ಪ್ರಾರ್ಥಿಸುತ್ತಾರೆ.

11.ಕರಸ್ಥಳದ ನಿಧಿ

ಚಕ್ರ ಬೆಸಗೈವಡೆ ಅಲಗಿನ ಹಂಗೇಕೆ?
ಮಾಣಿಕ್ಯದ ಬೆಳಗುಳ್ಳೊಡೆ ದೀಪದ ಹಂಗೇಕೆ?
ಪರುಷ ಕೈಯಲ್ಲುಳ್ಳೊಡೆ ಸಿರಿಯ ಹಂಗೇಕೆ?
ಕಾಮಧೇನು ಕರೆವೊಡೆ ಕರಾವಿನ ಹಂಗೇಕೆ?
ಎನ್ನ ದೇವ ಚನ್ನಮಲ್ಲಿಕಾರ್ಜುನ (ಮಹಾದೇವಿಯಕ್ಕ ಪ್ರಿಯ ಲಿಂಗದೇವ) ಲಿಂಗವು
ಕರಸ್ಥಳದೊಳಗುಳ್ಳೊಡೆ ಸಂಸಾರದ ಹಂಗೇಕೆ?

ವಿಷ್ಣುವಿನ ಕೈಯಲ್ಲಿ ಇರುವ ಚಕ್ರವು ಹೇಳಿದ ಮಾತು ಕೇಳುವಾಗ ಬೇರೆ ಕತ್ತಿ ಏಕೆ ಬೇಕು? ಹೊಳೆಯುವ ಮಾಣಿಕ್ಯವೇ ಕತ್ತಲೆಯನ್ನು ಕಳೆಯುವಾಗ ಬೇರೆ ಎಣ್ಣೆ ದೀಪ ಏತಕ್ಕೆ ಬೇಕು? ಸ್ಪರ್ಶಿಸಿ ಕಬ್ಬುನವನ್ನು ಬಂಗಾರವನ್ನಾಗಿ ಪರಿವರ್ತಿಸುವ ಪರುಷ ಕೈಯಲ್ಲಿ ಇರುವಾಗ ಬೇರೆ ಸಂಪತ್ತು ಏಕೆ ಬೇಕು? ಕಾಮಧೇನು ಎಂಬ ಹಸು ಇರುವಾಗ ಇನ್ನು ಸಾಮಾನ್ಯವಾದ, ಕರೆಯುವ ಆಕಳ ಏಕೆ ಬೇಕು? ಚನ್ನಮಲ್ಲಿಕಾರ್ಜುನ ಲಿಂಗದೇವನ ಕುರುಹಾದ ಇಷ್ಟಲಿಂಗವು ಕರಸ್ಥಲದಲ್ಲಿ ಇರುವಾಗ ಇನ್ನು ಸಂಸಾರ ಜೀವನದ ಸುಖವನ್ನು ಬಯಸುವುದಾದರೂ ಏಕೆ? ವಚನಗಳಲ್ಲಿ, ಕಾವ್ಯ ಪುರಾಣಗಳಲ್ಲಿ ಕೆಲವೊಂದು ಉದಾಹರಣೆಗಳು ಬರುತ್ತದೆ. ಇಂದಿನ ದಿನಮಾನದಲ್ಲಿ ಆ ವಸ್ತುಗಳು ಕಾಣಬರುವುದೇ ಇಲ್ಲ. ಚಕ್ರಾಯುಧ ಎಂಬ ಆಯುಧವನ್ನು ವಿಷ್ಣುವು (ಮತ್ತು ಕೃಷ್ಣ) ಹಿಡಿದಿರುತ್ತಾನೆಂಬುದು ಪುರಾಣಗಳಲ್ಲಿ ಉಲ್ಲೇಖ ವಾಗುತ್ತದೆ. ಆಫ್ರಿಕಾ ದೇಶದಲ್ಲಿ ಬಳಕೆಯಲ್ಲಿರುವ ಬೂಮ್‌ರ್‍ಯಾಂಗ್ ಎನ್ನುವ ಆಯುಧಕ್ಕೆ ಹೋಲಿಸಬಹುದೆ? ಹಿಂದಿನ ಕಾಲದಲ್ಲಿ ಶ್ರೀಮಂತರು, ರಾಜರು ಮಾಣಿಕ್ಯದ ಬೆಳಕನ್ನು ಬಳಸಿಕೊಳ್ಳುತ್ತಿದ್ದರಾಗಿ ಪ್ರಸ್ತಾಪವಾಗುತ್ತದೆ. ಇವತ್ತು ಸ್ವಯಂ ಪ್ರಕಾಶವುಳ್ಳ ಒಂದು ಮಾಣಿಕ್ಯವೂ ನಮ್ಮ ಅನುಭವಕ್ಕೆ ಬರದು. ಬೇರೆ ಪ್ರಕಾಶದಲ್ಲಿ ವಜ್ರ, ಇನ್ನಿತರ ಹರಳು ಹೊಳೆಯುತ್ತವೆ. ಅದೇ ರೀತಿ ಪರುಷ; ಅದು ಕಬ್ಬುನವನ್ನು ಸ್ಪರ್ಶಿಸಿ ಬಂಗಾರವನ್ನಾಗಿ ಮಾಡುತ್ತದೆ ಎಂದು ಹೇಳಲಾಗುವುದು. ಅಂಥ ಯಾವ ವಸ್ತುವು ಇಂದು ಕಾಣಬರುವುದಿಲ್ಲ. ಕಾಮಧೇನು ಎಂಬ ಹಸು ಕೇಳಿದ್ದನ್ನೆಲ್ಲ ಕೊಡುತ್ತದೆ ಎಂದು ಹೇಳಲಾಗುತ್ತದೆ. ದಿನಕ್ಕೆ 60 ಲೀಟರ್ ಹಾಲು ಕರೆಯುವ ವಿದೇಶಿ ಹೈಬ್ರಿಡ್ ತಳಿ ಹಸುಗಳಿವೆ. ಅಷ್ಟು ಹಾಲಿನಿಂದ ಬೇಕಾದಷ್ಟು ಸಂಪತ್ತು

ಗಳಿಸಬಹುದಲ್ಲವೆ? ಅಂಥ ಹಸು ಆಗ ಋಷಿಗಳ ಬಳಿ ಇದ್ದಿರಬಹುದು ಎಂದು ಊಹಿಸ ಬಹುದು.

12. ದೇವ ಪ್ರೇಮ

ಮಚ್ಚು ಅಚ್ಚುಗವಾಗಿ ಒಪ್ಪಿದ ಪರಿಯ ನೋಡಾ.
ಎಚ್ಚಡೆ ಗರಿದೋರದಂತಿರಬೇಕು.
ಅಪ್ಪಿದಡೆ ಅಸ್ಥಿಗಳು ನುಗ್ಗುನುಸಿಯಾಗಬೇಕು.
ಬೆಚ್ಚಡೆ ಬೆಸುಗೆಯನರಿಯದಂತಿರಬೇಕು
ಮಚ್ಚು ಒಪ್ಪಿತ್ತು, ಚನ್ನಮಲ್ಲಿಕಾರ್ಜುನನ (ಮಹಾದೇವಿಯಕ್ಕ ಪ್ರಿಯ ಲಿಂಗದೇವನ)
ಸ್ನೇಹದಲ್ಲಿ ತಾಯೆ.

"ಮಚ್ಚು ಅಂದರೆ ಪ್ರೀತಿ ಮನಸ್ಸಿನಲ್ಲಿ ಅಚ್ಚೊತ್ತಿ ಇರುವ ರೀತಿಯನ್ನು ನೋಡು ತಾಯಿ. ಬಾಣವನ್ನು ಶೂರನು ಬಿಟ್ಟರೆ(ಎಚ್ಚಡೆ) ಅದು ಎಷ್ಟು ಆಳವಾಗಿ ಇಳಿಯಬೇಕೆಂದರೆ ಅದರ ತುದಿಯಲ್ಲಿ ಇರುವ ಗರಿ ಕಾಣದಂತೆ ಇರಬೇಕು. ಆ ರೀತಿ ನನ್ನ ಪ್ರೀತಿ ಇದೆ. ಚೆನ್ನಮಲ್ಲಿಕಾರ್ಜುನ ನನ್ನು ಕುರಿತು ನನ್ನ ಪ್ರೀತಿ ಹಾಗಿದೆ." ದೇವ ವಿರಹಿಣಿ ಅಕ್ಕಮಹಾದೇವಿ ತನ್ನ ದೇವಪ್ರೇಮ ಕುರಿತು ತಾಯಿಗೆ ಹೇಳಿದ ಬಗೆ ಇದು.

13. ದೇವ ಸತಿಯ ವಿರಹ

ಮನ ಬೀಸರವಾದಡೆ ಪ್ರಾಣ ಪಲ್ಲಟವಹುದವ್ವಾ
ತನು ಕರಣಂಗಳು ಮೀಸಲಾಗಿ
ಮನ ಸಮರಸವಾಯಿತ್ತು ನೋಡಾ.
ಅನ್ಯವನರಿಯೆ ಭಿನ್ನವನರಿಯೆ.
ಎನ್ನ ದೇವ ಚನ್ನಮಲ್ಲಿಕಾರ್ಜುನಯ್ಯ (ಮಹಾದೇವಿಯಕ್ಕ ಪ್ರಿಯ ಲಿಂಗದೇವ)ನ
ಬಳಿಯವಳಾನು,
ಕೇಳಾ ತಾಯೆ!

"ಪರಮಾತ್ಮನ ನೆನಹಿನಿಂದ ಸ್ವಲ್ಪ ದೂರಸರಿದಡೆ (ಬೀಸರವಾದಡೆ) ಪ್ರಾಣವೇ ಹೋದಂತಾ ಗುವುದು. ಶರೀರ ಮತ್ತು ಇಂದ್ರಿಯಗಳು ದೇವನಿಗೆ ಮೀಸಲಾಗಿ ಮನಸ್ಸು ಸಮರಸವಾಗಿದೆ. ಬೇರೆ ಏನನ್ನೂ ನಾನರಿಯೆ. ಭಿನ್ನವಿಚಾರ ಮಾಡಲು ಸಿದ್ಧಳಿಲ್ಲ. ಚನ್ನಮಲ್ಲಿಕಾರ್ಜುನಯ್ಯನ ಹತ್ತಿರದವಳಾನು ಕೇಳಾ ತಾಯಿ." ಇದೂ ಸಹ ತಾಯಿಗೆ ಹೇಳುವ ಮಾತು.

14.ದೇವ ವಿರಹ

ಒಮ್ಮೆ ಕಾಮನ ಕಾಲ ಹಿಡಿವೆ,
ಮತ್ತೊಮ್ಮೆ ಚಂದ್ರಮಂಗೆ ಸೆರಗೊಡ್ಡಿ ಬೇಡುವೆ.
ಸುಡಲೀ ವಿರಹವ! ನಾನಾರಿಗೆ ಧೃತಿಗೆಡುವೆ?
ಚನ್ನಮಲ್ಲಿಕಾರ್ಜುನ ದೇವನು (ಮಹಾದೇವಿಯಕ್ಕ ಪ್ರಿಯ ಲಿಂಗದೇವನು)
ಎನ್ನನೊಲ್ಲದ ಕಾರಣ
ಎಲ್ಲರಿಗೆ ಹಂಗುಗಿತ್ತಿಯಾದೆನವ್ವಾ.

ಅನುಭಾವ ಪ್ರಪಂಚದಲ್ಲಿ ದೇವನಿಗಾಗಿ ಪರಿತಪಿಸುವ ಒಂದು ಹೃದಯ ಸ್ಪರ್ಶಿಘಟ್ಟ

ಬರುತ್ತದೆ. ಇದಕ್ಕೆ ಸಾಧಕರ ಜೀವನದ ಕಾಳರಾತ್ರಿ (Dark night of the soul) ಎನ್ನುವರು. ಆಗ ವಿವಿಧ ಭಾವನೆಗಳು ಉಕ್ಕುತ್ತಿರುತ್ತಿದೆ. ಸಾಧಕರ ವರ್ತನೆ ಬೇರೆ ಲೌಕಿಕರ ಕಣ್ಣಿನಲ್ಲಿ ವಿಲಕ್ಷಣವಾಗಿ ತೋರಿ ಬರುತ್ತದೆ.

"ಕಾಮಾ, ಅಂದು ಶಿವನನ್ನು ಮನವೊಲಿಸಲು ನೀನು ಹೂಬಾಣಗಳನ್ನು ಬಿಟ್ಟೆಯಂತೆ. ಇಂದು ಅದೇ ರೀತಿ ನನ್ನ ಸಲುವಾಗಿ ಏಕೆ ಪ್ರಯತ್ನಿಸಬಾರದು?" ಎಂದು ಕಾಮನನ್ನು ಬೇಡಿಕೊಳ್ಳುವಳು. ಚಂದ್ರಮನು ತನ್ನ ತಂಗಿರಣಗಳಿಂದ ಜನರನ್ನು ಪುಳಕಿತಗೊಳಿಸುವನು ಆದರೆ ಚಂದ್ರನ ಕಿರಣಗಳು ವಿರಹಿ ಮಹಾದೇವಿಯನ್ನು ಕಡು ಬೇಸಿಗೆಯ ಕಿರಣಗಳಂತೆ ಚುಚ್ಚುತ್ತಿವೆ. ದೇವ ವಿರಹ ತೀವ್ರವಾಗಿ ಕಾಡುತ್ತಿದೆ. ಹತಾಶೆಯಿಂದ ಧೈರ್ಯ ಕುಸಿದುಹೋಗುತ್ತದೆ. "ಲಿಂಗದೇವನು ನನಗೆ ಒಲಿದು, ನನ್ನನ್ನು ಸ್ವೀಕರಿಸದ ಕಾರಣ ನಾನು ಎಲ್ಲರಿಗೆ ಆಡಿಕೊಳ್ಳುವ ವಸ್ತುವಾಗಿದ್ದೇನೆ." ಎಂದು ಅಕ್ಕನವರು ಪರಿತಪಿಸುತ್ತಾರೆ.

15. ಸಂಸಾರದ ತೆರೆ

ತನುವಿನ ಸತ್ವವ ನಿಲಿಸಿತ್ತು, ಮನದ ವಿರಕ್ತಿಯ ಕೆಡಿಸಿತ್ತು.
ಘನವ ಕಾಣಲೀಯದು ದುಃಖ
ಅರುಹಿರಿಯರ ತರಕಟ ಕಾಡಿತ್ತು
ಚನ್ನಮಲ್ಲಿಕಾರ್ಜುನಯ್ಯಾ, (ಮಹಾದೇವಿಯಕ್ಕ ಪ್ರಿಯ ಲಿಂಗದೇವಯ್ಯಾ)
ನಿಮ್ಮ ಮರೆಗೊಂಡ ಸಂಸಾರದ ತೆರೆ ಎನ್ನ ಬರಲೀಯದಯ್ಯಾ.

ದೇವನನ್ನು ಮದುವೆಯಾಗಿದ್ದೇನೆ ಎನ್ನುವುದು, ದೇವನಿಗಾಗಿ ಹಂಬಲಿಸುವುದು ಲೌಕಿಕರ ಕಣ್ಣಿನಲ್ಲಿ ವಿಚಿತ್ರ, ವಿಲಕ್ಷಣ. ಸಾಧಕರು ವೈರಾಗ್ಯದೆಡೆಗೆ ಸಾಗುವಾಗ ಅದನ್ನು ಬಿಡಿಸಲು ಬಹಳ ಜನರು ಬುದ್ಧಿ ಹೇಳುವರು. ಹಲವು ಜನರ ಹಲವು ಮಾತು ಕೇಳಿದಾಗ ಸಾಧಕರಿಗೆ ಶರೀರದ ಶಕ್ತಿ ಕುಸಿದುಹೋದಂತೆ, ಮನಸ್ಸಿನ ವಿರಕ್ತಿ ಅಲ್ಲಾಡಿದಂತೆ ಭಾಸವಾಗುವುದು. ದುಃಖ ಘನವಾದ ಆದರ್ಶವನ್ನು ಮರೆಸಲು ಯತ್ನಿಸುವುದು. ವಯಸ್ಸಿನಿಂದ ಹಿರಿಯರಾದ ಅನೇಕರನ್ನು ಅಜ್ಞಾನವು ಕಾಡುವುದು. "ದೇವಾ, ಸಂಸಾರ ಎಂಬ ಅಲೆ ನಿನ್ನ ಬಳಿಗೆ ಬರಲೀಯದೆ ದೂರಕ್ಕೆ ಸೆಳೆಯುತ್ತಿದೆ." ಎಂದು ಅಕ್ಕನವರು ಪರಿತಪಿಸುವರು.

16.ದೇವನೊಲಿದುದೇ ಸುಖ

ಇಂದ್ರಿಯವ ಬಿಟ್ಟು ಕಾಯವಿರದು;
ಕಾಯವ ಬಿಟ್ಟು ಇಂದ್ರಿಯವಿರದು
ಎಂತು ನಿಃಕಾಮಿಯೆಂಬೆ, ಎಂತು ನಿರ್ದೋಷಿಯೆಂಬೆ?
ನೀನೊಲಿದಡೆ ಸುಖಿಯಾಗಿಪ್ಪೆ
ನೀನೊಲ್ಲದಿರೆ ದುಃಖಿಯಾಗಿಪ್ಪೆನಯ್ಯಾ ಚನ್ನಮಲ್ಲಿಕಾರ್ಜುನಯ್ಯಾ
(ಮಹಾದೇವಿಯಕ್ಕ ಪ್ರಿಯ ಲಿಂಗದೇವ).

ಶರೀರವನ್ನು ಆಶ್ರಯಿಸಿಕೊಂಡು ಇಂದ್ರಿಯಗಳು ಇರುತ್ತವೆ. ಪಂಚ ಜ್ಞಾನೇಂದ್ರಿಯಗಳಾದ ಕಿವಿ, ಕಣ್ಣು, ನಾಸಿಕ, ನಾಲಿಗೆ ಮತ್ತು ಚರ್ಮ, ಪಂಚ ಕರ್ಮೇಂದ್ರಿಯಗಳಾದ ವಾಕ್, ಪಾದ, ಪಾಣಿ, ಗುದ, ಗುಹ್ಯ, ಇವೆಲ್ಲವೂ ನೆಲೆಸಿರುವುದು ಶರೀರದ ಮೇಲೆಯೆ. ಆದ್ದರಿಂದ ಇಂದ್ರಿಯಗಳ ಬಿಟ್ಟು ಶರೀರವಿರುವುದಿಲ್ಲ; ಶರೀರವನ್ನು ಬಿಟ್ಟು ಇಂದ್ರಿಯಗಳಿರುವುದಿಲ್ಲ.


ಕರ್ನಾಟಕ ರಾಜ್ಯ ರಾಷ್ಟ್ರೀಯ ಬಸವ ದಳದ ಅಧ್ಯಕ್ಷರಾದ ಬಸವರಾಜ ಕೊಂಡಗುಳಿ ಅವರಿಂದ ಪೂಜ್ಯ ಮಾತಾಜಿಯವರಿಗೆ ಸತ್ಕಾರ


ಆಂಧ್ರ ಪ್ರದೇಶ ರಾಷ್ಟ್ರೀಯ ಬಸವ ದಳದ ಅಧ್ಯಕ್ಷರಾದ ಧನರಾಜ್ ಜೀರಗೆ ಅವರಿಂದ ಪೂಜ್ಯ ಮಾತಾಜಿಯವರಿಗೆ ಸತ್ಕಾರ


ಅದಮ್ಯ ಚೇತನ ಸಂಸ್ಥೆಯ ಮುಖ್ಯಸ್ಥೆ ಡಾ॥ ತೇಜಸ್ವಿನಿ ಅನಂತಕುಮಾರ ಅವರಿಂದ ಪೂಜ್ಯ ಮಾತಾಜಿಯವರಿಗೆ ಸತ್ಕಾರ



ಶರಣ ಕೃಷ್ಣಪ್ಪ ಶರಣೆ ಯಶೋದಮ್ಮ ಮತ್ತು ಶರಣ ಮಹೇಶ ಇವರಿಂದ ರಾಷ್ಟ್ರೀಯ ಬಸವ ದಳದ ಪರವಾಗಿ ನಿಧಿ ಸಮರ್ಪಣೆ



ಪೂಜ್ಯ ಮಾತಾಜಿಯವರ 69ನೆಯ ವರ್ಧಂತಿ ಕಾರ್ಯಕ್ರಮಕ್ಕೆ ಆಗಮಿಸಿದ ಡಾ॥ ಸಿ.ಸೋಮಶೇಖರ್ ಐ.ಎ.ಎಸ್ ಅವರಿಗೆ ಸತ್ಕಾರ



ಅದಮ್ಯ ಚೇತನ ಸಂಸ್ಥೆಯ ಮುಖ್ಯಸ್ಥೆ ಡಾ॥ ತೇಜಸ್ವಿನಿ ಅನಂತಕುಮಾರ ಅವರಿಗೆ ಪೂಜ್ಯ ಮಾತಾಜಿಯವರಿಂದ ಸತ್ಕಾರ



ಆಯುಕ್ತರಾದ ಶರಣ. ಬಿ.ಗುರುಪ್ರಸಾದ ಅವರಿಗೆ ಸತ್ಕಾರ



ಮಂಜುನಾಥ ನಗರದ ಬಿ.ಬಿ.ಎಂ.ಪಿ ಸದಸ್ಯರಾದ ಕೃಷ್ಣಪ್ಪ ಅವರಿಗೆ ಸತ್ಕಾರ



ಸಾಹಿತಿಗಳು ಮತ್ತು ಚಲನಚಿತ್ರ ನಟರಾದ ಡಾ॥ ಚಿಕ್ಕಹೆಜ್ಜಾಜಿ ಮಹದೇವ ಅವರಿಗೆ ಸತ್ಕಾರ



ಡಾ॥ ಸಿ.ಸೋಮಶೇಖರ್ ಐ.ಎ.ಎಸ್ ಅವರಿಂದ ಪೂಜ್ಯ ಮಾತಾಜಿಯವರ 69ನ
ವರ್ಧಂತಿ ಉದ್ಘಾಟನೆ



ಶರಣ ಶರಣೆಯರಿಂದ ಪೂಜ್ಯ ಮಾತಾಜಿಯವರಿಗೆ ಪುಷ್ಪವೃಷ್ಟಿ – ಆರತಿ



ಪೂಜ್ಯ ಮಾತಾಜಿಯವರ 69ನೆಯ ಹುಟ್ಟು ಹಬ್ಬಕ್ಕೆ ಆಗಮಿಸಿದ ಗಣ್ಯವ್ಯಕ್ತಿಗಳ
ವೇದಿಕೆಯ ಒಂದು ನೋಟ

ಇಂದ್ರಿಯಗಳು ಒಂದಲ್ಲ ಒಂದು ರೀತಿ ಕಾರ್ಯನಿರತವಾಗಿರುತ್ತವೆ. ಆದ್ದರಿಂದ ನಾನು ನಿಃಕಾಮಿ, ದೋಷ ರಹಿತಳು ಎಂದು ಹೇಗೆ ಹೇಳುವುದು? "ದೇವಾ, ನೀನು ಒಲಿದರೆ ನಾನು ಸುಖಿಯಾಗಿ ಸಮಾಧಾನದಿಂದ ಇರುತ್ತೇನೆ. ನೀನು ಒಲ್ಲದಿದ್ದರೆ ನಾನು ದುಃಖಿಯಾಗಿರುತ್ತೇನೆ." ಎನ್ನುವರು ಅಕ್ಕನವರು.

17. ಶರೀರ ನಶ್ವರ

ತನುವಿಡಿದ ಇಂದ್ರಿಯ ಸುಖ
ಸಿರಿಯಂತೆ ತೋರಿ ಅಡಗುತ್ತಲಿದೆ
ಗಗನದೊಡ್ಡಣೆಯಂತೆ ತನು;
ನೋಡ ನೋಡಲನುಮಾನವಿಲ್ಲದೆ ಹರಿದು ಹೋಗುತ್ತದೆ.
ಇವಾದಿಯ ಮಾಣಿಸಿ, ನಿಮ್ಮ ಘನನೆನಹಿನೊಳಿರಿಸಾ
ಚನ್ನಮಲ್ಲಿಕಾರ್ಜುನಯ್ಯಾ, (ಮಹಾದೇವಿಯಕ್ಕ ಪ್ರಿಯ ಲಿಂಗದೇವ)

ತನುವನ್ನು ಆಶ್ರಯಿಸಿದ ಇಂದ್ರಿಯ ಸುಖ ಕ್ಷಣಿಕ; ಸಿರಿಯಂತೆ ತೋರಿ ಅಡಗುತ್ತದೆ. ಆಕಾಶದಲ್ಲಿ ಮೂಡುವ ಮೋಡಗಳ ಸಮೂಹದಂತೆ ಶರೀರ ಸುಖ–ಮೋಡಗಳು ಬಗೆಬಗೆಯ ಚಿತ್ತಾರ ಮೂಡಿಸುತ್ತವೆ ನಂತರ ಕರಗಿ ಹೋಗುತ್ತವೆ. ಆದ್ದರಿಂದ ಇಂದ್ರಿಯ ಸುಖಾಕಾಂಕ್ಷೆ, ತನು ಮೋಹ ಮುಂತಾದುವನ್ನು ಬಿಡಿಸಿ ದೇವಾ, ನಿನ್ನ ನೆನಹಿನಲ್ಲಿ ಇರಿಸು.

18. ದೇವ ವಿರಹ

ಕಿಚ್ಚಿಲ್ಲದ ಬೇಗೆಯಲ್ಲಿ ಬೆಂದೆನವ್ವಾ
ಏರಿಲ್ಲದ ಗಾಯದಲ್ಲಿ ನೊಂದೆನವ್ವಾ
ಚನ್ನಮಲ್ಲಿಕಾರ್ಜುನ (ಮಹಾದೇವಿಯಕ್ಕ ಪ್ರಿಯ ಲಿಂಗ) ದೇವಂಗೊಲಿದು
ಬಾರದ ಭವಂಗಳಲ್ಲಿ ಬಂದೆನವ್ವಾ

"ಪರಮಾತ್ಮನ ಅಗಲಿಕೆ ಕಿಚ್ಚಿಲ್ಲದ ಬೇಗೆ; ಹೊರಗಡೆ ನೋಡಲು ಬೆಂಕಿ ಕಾಣದು. ಅಂತರಂಗದಲ್ಲಿ ದಹಿಸುತ್ತಿದೆ. ಮನದೊಳಗೆ ವಿರಹದ ಗಾಯವಾಗಿದೆ, ನೋವು ಸಹಿಸಲು ಅಸಾಧ್ಯ. ತಿನ್ನಲು ಉಣ್ಣಲು ಎಲ್ಲ ಸಂಪತ್ತು ಇದ್ದರೂ ಮಾನಸಿಕವಾಗಿ ಸುಖವಿಲ್ಲ. ಅದರಿಂದ ಉದ್ವೇಗ ಉಂಟಾಗುತ್ತಿದೆ. ದೇವರಿಗೆ ಒಲಿದು ಪಡಬಾರದ ಯಾತನೆಯನ್ನು ಪಡುತ್ತಿದ್ದೇನೆ." ಎಂದು ದೇವವಿರಹಿಯಾದ ಅಕ್ಕನವರು ಹೇಳುತ್ತಾರೆ.

19. ಶಿವನ ಕುರುಹು

"ಹೊಳೆಯ ಕೆಂಜೆಡೆಯ ಮೇಲೆ ಎಳೆವೆಳದಿಂಗಳು,
ಫಣಿಮಣಿ ಕರ್ಣಕುಂಡಲ ನೋಡವ್ವಾ
ರುಂಡಮಾಲೆಯ ಕೊರಳವನ ಕಂಡಡೆ ಒಮ್ಮೆ ಬರಹೇಳವ್ವಾ!
ಗೋವಿಂದನ ನಯನ ಉಂಗುಟದ ಮೇಲಿಪ್ಪುದು,
ಚನ್ನಮಲ್ಲಿಕಾರ್ಜುನದೇವನ ಕುರುಹವ್ವಾ

ಜಡೆಯನ್ನು ಕಟ್ಟಿದ್ದಾನೆ, ಅದರ ಮೇಲೆ ಬಾಲಚಂದ್ರನನ್ನು ಮುಡಿದಿದ್ದಾನೆ, ಹಾವುಗಳನ್ನು ಆಭರಣವಾಗಿ ಧರಿಸಿದ್ದಾನೆ, ಕಿವಿಗಳಲ್ಲಿ (ರುದ್ರಾಕ್ಷಿ) ಕುಂಡಲಗಳನ್ನು ಹಾಕಿಕೊಂಡಿದ್ದಾನೆ. ಕೊರಳಲ್ಲಿ ರುಂಡ ಮಾಲೆಯನ್ನು ಧರಿಸಿದ್ದಾನೆ. ಇಂಥ ಲಕ್ಷಣಗಳಿರುವ ವ್ಯಕ್ತಿ ಕಂಡರೆ ಬಂದು

ದರ್ಶನ ಕೊಡಲು ಹೇಳವ್ವ, ಗುರುತು ಹಿಡಿಯಲು ಇನ್ನೊಂದು ಕುರುಹ ಬೇಕಾಗಿದ್ದರೆ ಹೇಳುತ್ತೇನೆ ಕೇಳು. ಆತನ ಪಾದದ ಮೇಲೆ ಗೋವಿಂದನ ನಯನ ಇರುವುದು." ಚನ್ನಮಲ್ಲಿಕಾರ್ಜುನನ ಹಂಬಲದಲ್ಲಿರುವ ಮಹಾದೇವಿಗೆ ಆಕೆಯ ಗೆಳತಿ, "ಏನೇ ಯಾರನ್ನಾದರೂ ಪ್ರೀತಿಸಿದ್ದೀಯಾ? ಗುರುತುಗಳನ್ನು ಹೇಳು. ನಾನು ಕರೆತರುವೆ" ಎಂದಾಗ "ಇಂಥಾ ಲಕ್ಷಣಗಳಿರುವ ವ್ಯಕ್ತಿಯಿದ್ದರೆ ಕರೆ ತಾ" ಎಂದು ಭಾವುಕರಾಗಿ ಹೇಳುತ್ತಾರೆ ಅಕ್ಕನವರು.

20. ದೇವರು ಕೋಪಿಷ್ಠ

ಹುಟ್ಟದ ಯೋನಿಯಲ್ಲಿ ಹುಟ್ಟಿಸಿ
ಬಾರದ ಭವಂಗಳಲ್ಲಿ ಬರಿಸಿ,
ಉಣ್ಣದ ಊಟವನುಣಿಸಿ ವಿಧಿಗೊಳಗಾಗಿಸುವ ಕೇಳಿರಣ್ಣಾ.
ತನ್ನವರೆಂದಡೆ ಮನ್ನಿಸುವನೆ?
ಹತ್ತಿರಿದ್ದ ಭೃಂಗಿಯ ಚರ್ಮವ ಕಿತ್ತೀಡಾಡಿಸಿದವನು
ಮತ್ತೆ ಕೆಲಂಬರ ಬಲ್ಲನೆ?
ಇದನರಿತು ಬಿಡದಿರು ಬಿಡದಿರು.
ಚನ್ನಮಲ್ಲಿಕಾರ್ಜುನನಿಂತಹ ಸಿತಗನವ್ವಾ.

ತನ್ನನ್ನು ನಂಬಿದವರನ್ನು ದೇವರು ಬಗೆಬಗೆಯಲ್ಲಿ ಪರೀಕ್ಷಿಸುವನು. ಅನೇಕ ಜನ್ಮಗಳಲ್ಲಿ ಬರಿಸುವನು, ಉಣ್ಣಲಾರದ ಊಟವನ್ನು ಉಣಿಸುವನು ಅನೇಕ ಕಷ್ಟಗಳಿಗೆ ಈಡು ಮಾಡುವನು. ತನ್ನ ಆತ್ಮೀಯರು ಎಂದರೆ ಬಿಡುವನೆ? ತನ್ನ ಪರಮ ಭಕ್ತನಾದ ಭೃಂಗಿಯ ಚರ್ಮವನ್ನು ಕಿತ್ತು ಈಡಾಡಿಸಿದ. ಬಹಳ ಕೋಪಿಷ್ಠನಾದ ಚನ್ನಮಲ್ಲಿಕಾರ್ಜುನನನ್ನು ಬಿಡಬೇಡ, ಭದ್ರವಾಗಿ ಹಿಡಿ." ಎಂದು ಅಕ್ಕನವರು ತಮ್ಮ ಮನಸ್ಸಿಗೆ ಬೋಧೆ ಮಾಡುವರು.

21.ಚತುರ ಚನ್ನಮಲ್ಲಿಕಾರ್ಜುನ

ಬೋಳೆಯನೆಂದೂ ನಂಬಬೇಡ
ಠಾಳಕನವನು ಜಗದ ಬಿನ್ನಾಣಿ.
ಬಾಣ ಮಯೂರ ಕಾಳಿದಾಸ ಓಹಿಲ ಉದ್ಭಟ
ಮಲಹಣರವರಿಗಿತ್ತ ಪರಿ ಬೇರೆ
ಮುಕ್ತಿಯ ತೋರಿ, ಭಕ್ತಿಯ ಮರೆಸಿಕೊಂಬ
ಚನ್ನಮಲ್ಲಿಕಾರ್ಜುನನು.

ಶಿವನನ್ನು ಬೋಳೆ (ಮುಗ್ಧ) ಸ್ವಭಾವದವನು ಎಂದು ಬಣ್ಣಿಸಲಾಗುವುದು, ಏಕೆಂದರೆ ಅವನು ಭಸ್ಮಾಸುರನಂತಹ ಧೂರ್ತನಿಗೆ ವರಕೊಟ್ಟ. ಅವನು ಶಿವನ ತಲೆಯ ಮೇಲೆ ಕೈಯಿಟ್ಟು ವರಕೊಟ್ಟ ಶಿವನನ್ನೇ ಸುಡಲು ಯತ್ನಿಸಿದ. ಅಕ್ಕನವರು ಹೇಳುವರು. "ಶಿವನು ಬೋಳೆಯ ಸ್ವಭಾವದವನು ಎಂದು ನಂಬಬೇಡ. ಅವನು ಬಲು ಚತುರ. ಬಾಣ, ಮಯೂರ, ಕಾಳಿದಾಸ, ಓಹಿಲಯ್ಯ, ಉದ್ಭಟಯ್ಯ, ಮಲುಹಣ ಎಂಬುವವರಿಗೆ ಕೊಟ್ಟ ವರ ಬೇರೆಯದು. ತನ್ನ ದರ್ಶನವನ್ನು ಕೊಡದೆ ನಾಟಕವಾಡುವನು. ಮುಕ್ತಿಯನ್ನು ಕೊಡುವನು ತನ್ನ ಮರೆಸಿಕೊಂಬನು.

22.ದೇವರಿಗೊಲಿದವಳು

ಎನ್ನ ಮನವ ಮಾರುಗೊಂಡನವ್ವಾ
ಎನ್ನ ತನುವ ಸೂರೆಗೊಂಡೆನವ್ವಾ,
ಎನ್ನ ಸುಖವನೊಪ್ಪುಗೊಂಡನವ್ವಾ,
ಎನ್ನ ಇರವನಿಂಬುಗೊಂಡನವ್ವಾ
ಚನ್ನಮಲ್ಲಿಕಾರ್ಜುನನ (ಮಹಾದೇವಿಯಕ್ಕ ಪ್ರಿಯ ಲಿಂಗದೇವನಸ)
ಒಲುಮೆಯವಳಾನು.

ನನ್ನ ಪ್ರಿಯನಾದ ದೇವರು ನನ್ನ ಮನಸ್ಸನ್ನು ವ್ಯಾಪಿಸಿಬಿಟ್ಟಿದ್ದಾನೆ. ನನ್ನ ಶರೀರವನ್ನು ಕೊಳ್ಳೆ ಹೊಡೆದಿದ್ದಾನೆ. ನನ್ನ ಸುಖವನ್ನು ಕದ್ದಿದ್ದಾನೆ. ನನ್ನ ಇರುವಿಕೆಯನ್ನೇ ವ್ಯಾಪಿಸಿಬಿಟ್ಟದ್ದಾನೆ. ಚನ್ನಮಲ್ಲಿಕಾರ್ಜುನನ ಪ್ರೀತಿಯವಳಾನು.

23. ಲಿಂಗಾಂಗ ಸಾಮರಸ್ಯ

ಉರಿಯ ಫಣಿಯನುಟ್ಟು ಊರಿಂದ ಹೊರಗಿರಿಸಿ
ಕರೆಯಲ್ಪಟ್ಟಿದ ಸಖಿಯ ನೆರೆದ ನೋಡೆಲೆಗವ್ವಾ
ತೂರ್ಯಾವಸ್ಥೆಯಲ್ಲಿ ತೂಗಿ ತೂಗಿ ನೋಡಿ
ಬೆರಗಾಗಿ ನಿಲಲಾರೆನವ್ವಾ, ಆರವಸ್ಥೆ ಕರ ಹಿರಿದು ಎಲೆ ತಾಯೆ
ಗಿರಿ ಬೆಂದು ತರುವುಳಿದು ಹೊನ್ನರಳೆಯ ಮರನುಲಿವಾಗ
ಹಿರಿಯತನಗೆಡಿಸಿ ನೆರೆವೆನು ಚನ್ನಮಲ್ಲಿಕಾರ್ಜುನನ,
(ಮಹಾದೇವಿಯಕ್ಕ ಪ್ರಿಯ ಲಿಂಗದೇವನ).

ಪರಮಾತ್ಮನು ಚಿದಗ್ನಿ ಸ್ವರೂಪನು, ಈ ಜೀವಾತ್ಮನನ್ನು ತನ್ನ ವಲಯದಿಂದ ದೂರವಿಟ್ಟನು. ಇಂಥ ದೇವನನ್ನು ಕೂಡಬೇಕು ಎಂದು ಈ ಜೀವವು ಮನಸ್ಸು ಎಂಬ ಸಖಿಯನ್ನು ಕಳಿಸಿದಾಗ ಆ ದೇವನು ಮನದಲ್ಲಿ ತುಂಬಿಕೊಂಡನು. ಆಗ ಒದಗಿದ ತೂರ್ಯಾವಸ್ಥೆಯಲ್ಲಿ ತೂಗಿ ತೂಗಿ ನೋಡಿ ಸಂಭ್ರಾಂತಳಾಗಿ ನಿಲ್ಲಲಾರದಂತಾದೆ. ಆರನೆಯ ಸ್ಥಲವಾದ ಐಕ್ಯಸ್ಥಲದಲ್ಲಿ ನಿಲ್ಲುವುದು ಬಹು ಹೆಚ್ಚಿನದು.ಗಿರಿಯು ಬೇಯುವುದು ಅಂದರೆ ಅತ್ಯಂತ ಮೇಲಿರುವ ಸಹಸ್ರಾರವು ಬೆಳಕಿನಿಂದ ವೈಭವಿಸುವುದು. ಸುಷುಮ್ನಾನಾಡಿ (ತರುವು) ಜಾಗೃತಗೊಂಡು ಹೊನ್ನರಳೆಯ ಮರ ಅಂದರೆ ಹೃದಯವು ಅನಾಹತವಾದ ಪ್ರಣವ (ಓಂಕಾರ) ನಾದವನ್ನು ಉಲಿಯುವಾಗ ನಾನು ಲಿಂಗದೇವನ ಹಿರಿಯತನವನ್ನು ಕೆಡಿಸಿ ಅವನೊಡನೆ ಬೆರೆಯುವೆನು.

24. ಭಕ್ತಿಯ ಅರಿಸಿನ

ಚಿನ್ನಕ್ಕರಿಸಿನ ಚಿನ್ನಕ್ಕರಿಸಿನ ಚಿನ್ನಕ್ಕರಿಸಿನವ ಕೊಳ್ಳಿರವ್ವಾ
ಎಮ್ಮ ನಲ್ಲನ ಮೈಯ ಹತ್ತುವ ಅರಿಸಿನವ ಕೊಳ್ಳಿರವ್ವಾ
ಒಳಗುಂದದರಿಸಿನವ ಮಿಂದು
ಚನ್ನಮಲ್ಲಿಕಾರ್ಜುನನ ಅಪ್ಪಿರವ್ವಾ

ಭಕ್ತಿಯೇ ಇಲ್ಲಿ ಅರಿಷಿಣ. ದೈವೀ ಶರಣಾಗತಿ ಎಂಬ ಅರಿಷಿಣವ ಕೊಳ್ಳಿರಿ ಸದ್ಭಕ್ತರೆ. ಎಮ್ಮ ನಲ್ಲ ಪರಮಾತ್ಮನಿಗೆ ಮೆಚ್ಚುಗೆಯಾಗುವ, ಅವನು ಹಚ್ಚಿಕೊಳ್ಳುವ ಅರಿಷಿಣವಿದು. ಈ ಭಕ್ತಿಯ ಅರಿಷಿಣದಲ್ಲಿ ಮಿಂದು ಪರಮಾತ್ಮನನ್ನು ಅಪ್ಪಿಕೊಳ್ಳಿರಿ ಎಂದು ಅಕ್ಕನವರು ಹೇಳುತ್ತಾರೆ.

ಶ್ರದ್ಧಾಂಜಲಿ

– ಪೂಜ್ಯ ಮಾತಾಜಿ

ಧಾರವಾಡದಲ್ಲಿ ಕಾರ್ಯಕ್ರಮಗಳಿದ್ದುದರಿಂದ ಜನವರಿ 3ರಂದು ಬೆಂಗಳೂರಿನಿಂದ ಹೊರಟೆ. ಮಾತೃ ಶ್ರೀ ಗಂಗಮ್ಮ(ತಾಯಿ)ನವರು ಬಂದು, "ನಾನೂ ಶರಣ ಮೇಳಕ್ಕೆ ಬರುತ್ತೇನೆ." ಎಂದರು. " ಬೇಡಮ್ಮ, ಈ ವಯಸ್ಸಿನಲ್ಲಿ (89ವರ್ಷ) ಹೆಚ್ಚು ಪ್ರಯಾಣ ಮಾಡಬಾರದು. ಇಲ್ಲಾದರೆ ಪಕ್ಕದಲ್ಲೇ ಸಿಟಿ ಆಸ್ಪತ್ರೆಯಿದೆ. ಅವರು ಚೆನ್ನಾಗಿ ಆರೈಕೆ ಮಾಡುತ್ತಾರೆ. ಕೂಡ ಸಂಗಮದಲ್ಲಿ ಇದ್ದಾಗ ಸ್ವಲ್ಪ ಹೆಚ್ಚು ಕಡಿಮೆ ಆದರೂ ಐವತ್ತು ಕಿಲೋ ಮೀಟರ್ ದೂರದ ಬಾಗಲಕೋಟೆಗೆ ಹೋಗಬೇಕು." ಎಂದೆ. ಮುಖ ಸಣ್ಣದು ಮಾಡಿಕೊಂಡು ಶಾಂತಾ ಮಾತಾಜಿಯ ಹತ್ತಿರ, "ಮಾತಾಜಿ ಬೇಡ ಅಂದು ಬಿಟ್ಟರು."ಎಂದರಂತೆ. ಶಾಂತಾ ಬಂದು ಹೇಳಿದಾಗ "ಆಗಲಿ, ಬಂದು ಬಿಡಲಿ. ನಾನು ಬಹಳ ಊರುಗಳಿಗೆ ಹೋಗುವುದಿದೆ. ನಿಮ್ಮ ಜೊತೆ ಜೋಪಾನವಾಗಿ ಕರೆದುಕೊಂಡು ಬನ್ನಿರಿ." ಎಂದು ಒಪ್ಪಿಗೆ ಕೊಟ್ಟೆ. ತಾಯಿಯವರು ಖುಷಿಯಾದರು.

ಇವರೆಲ್ಲ 10ನೆಯ ತಾರೀಖು ಹೊರಡುವವರಿದ್ದರು. ಗಂಗಮ್ಮಜ್ಜಿಯವರೂ ಉತ್ಸಾಹ ದಿಂದ ಹೊರಟಿದ್ದರು. ಆದರೆ ಹಿಂದಿನ ದಿನ ಆಕಸ್ಮಿಕವಾಗಿ ಕಾಲು ಜಾರಿ ಬಚ್ಚಲು ಮನೆಯಲ್ಲಿ ಬಿದ್ದುಬಿಟ್ಟರು. ತಕ್ಷಣವೇ ಪಕ್ಕದ ಸಿಟಿ ಆಸ್ಪತ್ರೆಗೆ ಸೇರಿಸಲಾಯಿತು. ಮರುದಿನ ಕಳಿಸುವವರನ್ನೆಲ್ಲಾ ಮಾತನಾಡಿ ಕಳಿಸಿಕೊಟ್ಟರಂತೆ. ಆದರೆ ನಂತರ ರಕ್ತದೊತ್ತಡ ಕುಸಿಯತೊಡಗಿದಂತೆ ಪ್ರಜ್ಞಾಹೀನ (ಕೋಮಾ) ಸ್ಥಿತಿಗೆ ಜಾರಿ, "ಮಾತಾಜಿ, ಮಾತಾಜಿ" ಎಂದು ಕನವರಿಸತೊಡಗಿದರಂತೆ. ನನಗೆ ತಿಳಿಸಿದರು. 11ನೆಯ ತಾರೀಖು ಶರಣ ಮೇಳ ಆರಂಭವಾಗಿದೆ. ಇದನ್ನು ಬಿಟ್ಟು ಹೋಗುವುದು ಹೇಗೆ? ಕಾಯಕದಲ್ಲಿ ನಿರತನಾದರೆ ಗುರುದರ್ಶನವನ್ನಾದರೂ ಮರೆಯಬೇಕು" ಎಂಬ ಶರಣ ಆಯ್ದಕ್ಕಿ ಮಾರಯ್ಯನವರ ವಾಣಿ ಮಾರ್ಗದರ್ಶನ ಮಾಡಿತು. ಮಮಕಾರಕ್ಕಿಂತ ಕರ್ತವ್ಯ ಮುಖ್ಯ ಎಂದು ನಿರ್ಧರಿಸಿದೆ. ಕಡೆಗೆ ಒಂದು ಉಪಾಯ ಯೋಜಿಸಿದೆವು. "ಹೇಗಿದ್ದರೂ ಪೂಜ್ಯ ಗಂಗಾ ಮಾತಾಜಿ ಕಾವಿಯುಡುತ್ತಾರೆ; ಮುಡಿ ಕಟ್ಟುತ್ತಾರೆ. ನನ್ನ ಬದಲು ಅವರೇ ಹೋಗಲಿ." ಎಂದು ಅವರನ್ನೇ ಬೆಂಗಳೂರಿಗೆ ಕಳಿಸಿದೆವು. ಪ್ರಜ್ಞಾಹೀನರಾಗಿದ್ದ ಗಂಗಮ್ಮಜ್ಜಿ, "ನಾನು ಮಾತಾಜಿ ಬಂದಿದ್ದೇನೆ." ಎಂದು ಹೇಳುತ್ತಲೇ ಒಮ್ಮೆ ಕಣ್ತೆರೆದು ನೋಡಿ ಪುನಃ ಕಣ್ಣು ಮುಚ್ಚಿದರಂತೆ. ಅವರನ್ನು ಐಸಿಯುನಲ್ಲಿ ಇರಿಸಲಾಗಿತ್ತು. ಗಂಗಾ ಮಾತಾಜಿ ಅಲ್ಲಿಂದ ಹೊರಟು ಬಂದರು. 13ನೆಯ ದಿನಾಂಕ ಮಾತೃಶ್ರೀ ಗಂಗಮ್ಮಜ್ಜಿಯವರ ಪ್ರಾಣವು ವಾಯುವಿನಲ್ಲಿ ಲೀನವಾಗಿದೆ. ಶ್ರೀಕಂಠಮೂರ್ತಿ ತಿಳಿಸಿದ್ದರೂ ನನಗೆ ಗಂಗಾ ಮಾತಾಜಿ ಮುಂತಾದವರು ತಿಳಿಸದೆ ಮುಚ್ಚಿಟ್ಟಿದ್ದಾರೆ. ದಿ.14ರಂದು ಬೆಳಿಗ್ಗೆ ನಾನು ಸ್ನಾನ ಮಾಡಿಕೊಂಡು ಹೊರಬಂದಾಗ ಕೆಲವರು ಗುಂಪು ಕಟ್ಟಿಕೊಂಡು ಪಿಸಿಪಿಸಿ ಚರ್ಚೆ ಮಾಡುತ್ತಿದ್ದರು. "ಏನದು ಅಷ್ಟು ಗುಟ್ಟಾಗಿ ಮಾತನಾಡುತ್ತಿದ್ದೀರಿ? ಎಂದು ಕೇಳಿದಾಗ, "ಗಂಗಮ್ಮಜ್ಜಿ ನಿನ್ನೆ ಲಿಂಗೈಕ್ಯರಾದಂತೆ" ಎಂದು ಗಂಗಾ ಮಾತಾಜಿ ಹೇಳಿದರು. "ನನಗೇಕೆ ತಿಳಿಸಲಿಲ್ಲ.?" ಎಂದು ಕೇಳಿದೆ. "ಪೀಠಾರೋಹಣ ಇದ್ದುದರಿಂದ ತಿಳಿಸಲಿಲ್ಲ ನಿಮಗೆ ಆಘಾತವಾಗಬಹುದೆಂದು." ಎಂದರು. "ನಾನೇನು ಅಜ್ಞಾನಿಯೆ? ಅವರ ಸಾವಿನ ಸುದ್ದಿ ತಿಳಿದು ಗಾಬರಿಯಾಗಲು. ಅವರು ತುಂಬು ಜೀವನ ನಡೆಸಿದರು. ಸಾರ್ಥಕದ ಬಾಳು ಬಾಳಿದ್ದಾರೆ." ಎಂದು ಹೇಳಿದೆ. ದಿ.14 ಮತ್ತು 15ರಂದು

ನಾನು ಹೊರಡಲು ಸಾಧ್ಯವೇ ಇರಲಿಲ್ಲ. ಆದ್ದರಿಂದ ದಿ.16ರಂದು ಅಂತಿಮ ಸಂಸ್ಕಾರ ಇಟ್ಟುಕೊಳ್ಳಿರಿ ಎಂದು ತಿಳಿಸಿದೆವು. ಪ್ರಾಣ ಹೋಗುತ್ತಿದ್ದಂತೆಯೇ ಸಂಸ್ಕಾರಕ್ಕೆ ಮೂರು ದಿವಸವಿದ್ದ ಕಾರಣ ಪಾರ್ಥಿವ ಶರೀರವನ್ನು ಎಂ.ಎಸ್.ರಾಮಯ್ಯ ಆಸ್ಪತ್ರೆಯ ಶೀತಲ ಕೋಣೆಯಲ್ಲಿ ಪೆಟ್ಟಿಗೆಯಲ್ಲಿ ಹಾಕಿಡಲು ಶ್ರೀಕಂಠ ಮೂರ್ತಿ ವ್ಯವಸ್ಥೆ ಮಾಡಿದ್ದರು. ಅಲ್ಲಿಂದ 15ರ ಸಂಜೆ ತಂದು ಬಸವ ಮಂಟಪದಲ್ಲಿ ಅಂತಿಮ ದರ್ಶನಕ್ಕೆ ಇಟ್ಟಿದ್ದರು. ಕೂಡಲ ಸಂಗಮದಿಂದ ದಿ.16ರಂದು ಹೊರಟು ಸಾಸಲಹಟ್ಟಿ ತಲ್ಪಿ, ಸಂಸ್ಕಾರವನ್ನು ಮುಗಿಸಿದೆವು. ಪುಟ್ಟ ದೇಹದ ಗಂಗಮ್ಮಜ್ಜಿ ಕುಲಾವಿ ತೊಟ್ಟ ಸಣ್ಣ ಮಗುವಿನಂತೆ ಕಾಣುತ್ತಿದ್ದರು. ನಮ್ಮ ನಿರೀಕ್ಷೆಗೆ ಮೀರಿ ಶರಣ ಬಂಧುಗಳು ಎಲ್ಲೆಲ್ಲಿಂದಲೋ ಬಂದಿದ್ದರು. ಬಂದವರೆಲ್ಲರೂ ಗಂಗಮ್ಮನವರ ಗುಣಗಾನ ಮಾಡುವವರೆ. ಭೇಟಿ ಮಾಡಿದ, ಮಾಡುತ್ತಿದ್ದ ಎಲ್ಲರನ್ನೂ ಅದೆಷ್ಟು ಆದರದಿಂದ ಕಾಣುತ್ತಿದ್ದರು ಎಂದು ಸ್ಮರಿಸುವವರೆ. ಅಕ್ಕಮಹಾದೇವಿ ಮಠದ ಶರಣೆ.ವನಜಾಕ್ಷಮ್ಮನವರು, ಶರಣ. ಮನೋಹರ, ಶರಣ ಚಂದ್ರಶೇಖರ್ ಅವರು ಶಾಮಿಯಾನಾ, ವೇದಿಕೆ, ಧ್ವನಿವರ್ಧಕ ಎಲ್ಲ ಸಿದ್ಧಪಡಿಸಿದ್ದರಿಂದ ಜನರಿಗೆ ಸ್ವಲ್ಪವೂ ತೊಂದರೆಯಾಗಲಿಲ್ಲ. ನೆರಳಲ್ಲಿ ಕುಳಿತು ಶ್ರದ್ಧಾಂಜಲಿ ಸಮರ್ಪಿಸಿ ಮಾತೃ ಶ್ರೀ ಗಂಗಮ್ಮನವರಿಗೆ ಅಂತಿಮ ವಿದಾಯ ಹೇಳಿದರು. ನಂತರ ಕೈಕಾಲು ಮುಖ ತೊಳೆದು ವಿಭೂತಿ ಧರಿಸಿಕೊಂಡು ಪ್ರಸಾದವನ್ನು ಸ್ವೀಕರಿಸಿ ತಮ್ಮ ತಮ್ಮ ಊರಿಗೆ ತೆರಳಿದರು. ಒಂದು ಸಮಾರಂಭದಂತೆ ಅಂತಿಮ ಸಂಸ್ಕಾರದ ಕಾರ್ಯಕ್ರಮ ಪೂರೈಸಿತು.

ಕರ್ತವ್ಯ ಚ್ಯುತಿಯೆ?

ದಿ.9ರಂದು ಕಾಲು ಜಾರಿ ಬಿದ್ದ ನಂತರ 11ನೆಯ ತಾರೀಖು ಗಂಭೀರ ಸ್ಥಿತಿಗೆ ಬಂದರು. ಆರೋಗ್ಯವಾಗಿ ಓಡಾಡಿಕೊಂಡಿದ್ದರು. 89 ವರ್ಷದಲ್ಲಿದ್ದ ಗಂಗಮ್ಮನವರು 100 ವರ್ಷ ಬದುಕುತ್ತಾರೆ ಎಂಬ ನಿರೀಕ್ಷೆ ಆಶ್ರಮವಾಸಿಗಳದಾಗಿದ್ದಿತು. ಅವರ ಸಾತ್ವಿಕತೆ, ಸದ್ಗುಣ ಗಳಿಂದಾಗಿ ಆಶ್ರಮದ ಸಾಧಕರಿಗೆ ಮತ್ತು ಭಕ್ತರಿಗೆ ಪ್ರೀತಿಪಾತ್ರರಾಗಿದ್ದರು. ಹೀಗಾಗಿ ಆಶ್ರಮದ ಸಾಧಕರು ಗಂಗಮ್ಮನವರನ್ನು ಹೂವಿನಂತೆ ಜೋಪಾನ ಮಾಡುತ್ತಿದ್ದರು. 11ನೆಯ ತಾರೀಖು ಶರಣ ಮೇಳ ಆರಂಭವಾಗಿದ್ದ ಕಾರಣ ಮಾತೃ ಶ್ರೀ ಗಂಗಮ್ಮನವರಿಗೆ ಗಂಭೀರ ಸ್ಥಿತಿಯುಂಟಾ ಗಿರುವುದು ತಿಳಿದರೂ ಹೊರಡಲಾಗಲಿಲ್ಲ. "ಕಾಯಕದಲ್ಲಿ ನಿರತನಾದಡೆ ಜಂಗಮ ಮುಂದಿದ್ದರೂ ಹಂಗು ಹರಿಯಬೇಕು." ಎಂಬ ಶರಣ ವಾಣಿ ಎಚ್ಚರಿಕೆ ನೀಡುತ್ತಿತ್ತು. ಬಹುದೂರದ ಬೆಂಗಳೂರಿಗೆ ಹೋಗಿ ಬರಲು ಎರಡು ದಿನ ಬೇಕು. 13 ಮತ್ತು 14 ನಮ್ಮ ಮುಖ್ಯ ದಿನಗಳು. ಹೀಗಾಗಿ ನಾನು ಹೊರಟರೆ ಶರಣ ಮೇಳದ ಕಾರ್ಯಕ್ರಮ ಅಸ್ತವ್ಯಸ್ಥವಾಗುತ್ತಿತ್ತು.

ನಂತರ ಫೆಬ್ರವರಿ 2ರಂದು ಶರಣ ಗಣಾರಾಧನೆ ಎಂದು ದಿ.16ರಂದು ನಿರ್ಧರಿಸಿದರು. ಆಗ ನಾನು ಹೇಳಿದೆ, "ಅಂದು ನಾನು ಬರಲು ಆಗುವುದಿಲ್ಲ. ತಪ್ಪು ತಿಳಿಯಬೇಡಿರಿ. ಫೆಬ್ರವರಿ 2ರಂದು ಗೋಕಾಕಿಗೆ ಹೋಗಬೇಕು. ಎರಡು ತಿಂಗಳ ಮೊದಲು ಒಪ್ಪಿಕೊಂಡ ಕಾರ್ಯಕ್ರಮ ಅದು. ನಾನು ಇಂದು ಭಾಗವಹಿಸಿ ಕರ್ತವ್ಯ ಪೂರೈಸಿದ್ದೇನೆ. ನೀವೆಲ್ಲ ಸೇರಿ ಮಾಡಿರಿ." ಎಂದಾಗ ಎಲ್ಲರೂ ಒಪ್ಪಿದರು. ಆದರೆ ನಂತರ ಕೆಲವರು, "ಮಾತಾಜಿ ಗಣಾರಾಧನೆಗೆ ಬರಲಿಲ್ಲ; ಸಮಾಧಿಗೆ ಹಾಲು-ತುಪ್ಪ ಬಿಡಲಿಲ್ಲ." ಎಂದರಂತೆ. ಹೋಗಿದ್ದರೂ ಮಣ್ಣಿನ ಗುಡ್ಡೆಗೆ ನಾವೇನೂ ಹಾಲು-ತುಪ್ಪ (ಆಪ್ಯಾಯನ ಪ್ರಸಾದ) ಹಾಕುತ್ತಿರಲಿಲ್ಲ. ಜನರ ಮಾತು ಮುಖ್ಯವಲ್ಲ ತತ್ವ ಮುಖ್ಯ!

ಆದರ್ಶ ಮಾತೆ

ಶರಣೆ.ಗಂಗಮ್ಮನವರು ಹುಟ್ಟಿದಾಗಿನಿಂದಲೂ ಕಷ್ಟಕೋಟಲೆಯಲ್ಲೇ ಬೆಳೆದವರು. ಮಗುವಿದ್ದಾಗಲೇ ತಾಯಿಯನ್ನು ಕಳೆದುಕೊಂಡು ತಬ್ಬಲಿಯಾದರು. ಮಲತಾಯಿಯ ಕೈಯಲ್ಲಿ ಹಿಂಸೆ ಪಟ್ಟರು. ನಂತರ ಚಿಕ್ಕವಯಸ್ಸಿನಲ್ಲೇ ಪತಿಯನ್ನು ಕಳೆದುಕೊಂಡರು. ಪರಾವಲಂಬನೆಯಲ್ಲೇ ಜೀವನ ಸವೆಸಿದರು. ನಾನು ಸನ್ಯಾಸ ಸ್ವೀಕರಿಸಿದೆ. ಇದ್ದೊಬ್ಬ ಮಗ ದುಶ್ಚಟಗಳಿಗೆ ಬಿದ್ದು ಅಪಾರವಾಗಿದ್ದ ಆಸ್ತಿಯನ್ನೆಲ್ಲ ಕಳೆದ. ಇದರಿಂದ ಬಡತನದ ಭೂತ ಮೇಲೆರಗಿತು. ಕಡೆಯ ದಿನಗಳಲ್ಲಿ ಕೊಂಚ ನೆಮ್ಮದಿಯಿಂದ ಇರುವಂತಾಯಿತು. ಅವರ ಬಾಲ್ಯದಿಂದ ಮೊಳೆತ ಆಸೆ "ಮಠದಲ್ಲಿ ಇರಬೇಕು ಎನ್ನುವುದು" ಅವರ ಜೀವನದ ಕಡೆಯ ದಿನಗಳಲ್ಲಿ ಪೂರೈಸಿತು. ನಮ್ಮ ಪೂರ್ವಾಶ್ರಮದ ತಾಯಿಯಾಗಿ ಅವರು ಇರದೆ, ಯಾರ ಮೇಲೂ ಅಧಿಕಾರ ಚಲಾಯಿಸದೆ ಶರಣೆಯಾಗಿ ಇದ್ದು ಎಲ್ಲರ ಪ್ರೀತಿ, ಗೌರವಗಳಿಗೆ ಪಾತ್ರರಾಗಿದ್ದರು. ಬೆಂಗಳೂರಿನಲ್ಲೇ ಇರುವ ಮೊಮ್ಮಕ್ಕಳು ಹಬ್ಬ, ಹುಟ್ಟು ಹಬ್ಬಗಳ ನಿಮಿತ್ತ ಮನೆಗೆ ಕರೆದರೆ ಹೋಗಿ ಅಂದೇ ಬಸವ ಮಂಟಪಕ್ಕೇ ಹಿಂದಿರುಗುತ್ತಿದ್ದರು. ಪ್ರತ್ಯೇಕ ಗ್ಯಾಸ ಒಲೆ ಇಟ್ಟುಕೊಂಡು ಭೇಟಿಯಾಗಲು ಬಂದವರಿಗೆಲ್ಲ ತಾವೇ ಸ್ವತಃ ಕಾಫಿ, ಟೀ ಮಾಡಿಕೊಡದಿದ್ದರೆ ಅವರಿಗೆ ಸಮಾಧಾನವಿರುತ್ತಿರಲಿಲ್ಲ. ಮೊದಲಿನಿಂದಲೂ ದಾಸೋಹ ಮೂರ್ತಿಯಾಗಿಯೇ ಸಾಗಿ ಬಂದ ಅವರು ಕಡೆಯ ಕ್ಷಣದವರೆಗೂ ದಾಸೋಹದಲ್ಲೇ ಸಂತೋಷ ಕಾಣುತ್ತಿದ್ದರು.

ಸನ್ಯಾಸಕ್ಕೆ ಪ್ರೇರಣೆ

ದಿನನಿತ್ಯ ಬಾಲ್ಯದಲ್ಲಿ ಶರಣೆ.ಗಂಗಮ್ಮನವರು ನಮಗೆಲ್ಲ ನೀತಿಪಾಠಗಳನ್ನು ಹೇಳುತ್ತಿದ್ದರು. ಭಕ್ತ ಮಾರ್ಕಂಡೇಯ, ಧ್ರುವ, ಹೇಮರೆಡ್ಡಿ ಮಲ್ಲಮ್ಮ, ರಾಷ್ಟ್ರವೀರ ಶಿವಾಜಿ ಮುಂತಾದವರ ಸಾಧನೆಯ ಕಥೆಗಳು, ಸ್ವಾತಂತ್ರ್ಯ ಸಂಗ್ರಾಮದಲ್ಲಿ ಪ್ರಾಣಾರ್ಪಣೆ ಮಾಡಿದವರ ವಿರೋಚಿತ ಕಥೆಗಳು ನನ್ನಲ್ಲಿ ಬಗೆಬಗೆಯ ಭಾವನೆ ಉಕ್ಕಿಸುತ್ತಿದ್ದವು. ಒಂದು ದಿನ ಮಲಗುವ ಮುನ್ನ ಧ್ರುವನಂತೆ ದೇವರನ್ನು ಕಾಣಲು ಕಾಡಿಗೆ ಹೋಗಬೇಕು ಎಂದು ಹೇಳಿದೆ. "ಸಣ್ಣ ಮಕ್ಕಳು ಕಾಡಿಗೆ ಹೋಗಬಾರದು. ಅಲ್ಲಿ ಹುಲಿ ಕರಡಿ ಮುಂತಾದ ಕ್ರೂರಮೃಗಗಳು ಇರುತ್ತವೆ." ಎಂದು ಅವರು ಹೇಳಿದಾಗ "ಮತ್ತೆ ಧ್ರುವ ಹೋಗಿದ್ದನಲ್ಲ" ಎಂದು ಕೇಳಿದ್ದೆ. "ದೊಡ್ಡವಳಾದ ಮೇಲೆ ಹೋಗುವಿಯಂತೆ" ಎಂದು ಸಮಾಧಾನ ಮಾಡಿ ಮಲಗಿಸಿದರು.

ಅವರು ನನಗಾಗಿ ಗರ್ಭಿಣಿ ಇದ್ದಾಗ ದೇವರಲ್ಲಿ "ಅಕ್ಕಮಹಾದೇವಿಯಂಥ ಮಗಳನ್ನು ಕೊಡು."ಎಂದು ಬೇಡುತ್ತಿದ್ದರಂತೆ. ಮುಂದೆ ನಾನು ಸನ್ಯಾಸಿನಿಯಾಗಬೇಕು ಎಂದು ಪ್ರಯತ್ನಿಸುವಾಗ ಅವರು ಬೇಡ ಎಂದು ನುಡಿದಾಗ, "ನಾನು ಗರ್ಭದಲ್ಲಿದ್ದಾಗ ನೀವು ಹಾಗೇಕೆ ಬೇಡಿಕೊಳ್ಳಬೇಕಿತ್ತು.? ಅದಕ್ಕಾಗಿ ನನಗೆ ಇಂಥ ಪ್ರೇರಣೆಯುಂಟಾಗಿದೆ." ಎಂದು ನಾನು ಹೇಳುತ್ತಿದ್ದೆ. " ಸಂಸಾರದಲ್ಲಿ ಏನೂ ಸುಖವಿಲ್ಲ, ಬರೀ ಕಷ್ಟಕೋಟಲೆ ಇದನ್ನು ಬಿಡಿಸಿಕೊಂಡು ಮುಕ್ತರಾಗ ಬೇಕು. ನನಗೆ ಬಾಲ್ಯದಿಂದಲೂ ಸನ್ಯಾಸ, ಆಶ್ರಮವಾಸ ಎಂದರೆ ಇಷ್ಟ. ಆದರೆ ಧೈರ್ಯವಿರಲಿಲ್ಲ. ಹೊರಗಡೆ ಜಗತ್ತೂ ತಿಳಿಯದು. ವಿದ್ಯೆ ಮೊದಲೇ ಇಲ್ಲ. ಹೀಗಾಗಿ ದೊಡ್ಡವರು ಹೇಳಿದಂತೆ ಕೇಳಬೇಕಾಯಿತು." ಎಂದು ಅನೇಕ ಸಾರಿ ಅನ್ನುತ್ತಿದ್ದರು.

ಅವರು ಓದಿದ್ದು ಎರಡನೆ ತರಗತಿ. ಆದರೆ ಗ್ರಂಥಗಳನ್ನು ಓದುವ ಹವ್ಯಾಸ ಬೆಳೆಸಿಕೊಂಡಿದ್ದರಿಂದ ಹಳೆಗನ್ನಡದ ಕಾವ್ಯಗಳನ್ನು ಸರಾಗವಾಗಿ ಓದುತ್ತಿದ್ದರು. ನಮ್ಮ ನಿಕಟ ಸಂಪರ್ಕಕ್ಕೆ ಬಂದು ಏಕದೇವೋಪಾಸಕರಾಗುವ ಮೊದಲು ಭಾಮಿನಿ ಷಟ್ಪದಿಯಲ್ಲಿ ದೇವಿ ಪುರಾಣವನ್ನು ಸ್ವಲ್ಪವೂ ತಪ್ಪಿಲ್ಲದೆ ಬಾಯಿಪಾಠ ಮಾಡಿ 16 ಅಧ್ಯಾಯಗಳನ್ನು ರಾಗವಾಗಿ

ಓದುತ್ತಿದ್ದರು. "ನೆನಪಿನಾಳದಿಂದ" ಎಂಬ ಪುಸ್ತಕವನ್ನು ಅವರು ಬರೆದರು. ಅವರು ಬರೆದುದರಲ್ಲಿ ಹೆಚ್ಚಿನ ತಿದ್ದುಪಡಿ ಮಾಡುವುದು ಅಗತ್ಯವಿರಲಿಲ್ಲ. ಮೊದಲನೆ ಬಾರಿ ಕಣ್ಣಿನ ಶಸ್ತ್ರ ಚಿಕಿತ್ಸೆ ಆಗುವಾಗ ನರವೊಂದು ಕತ್ತರಿಸಲ್ಪಟ್ಟು ಕಣ್ಣು ಕಾಣದಾಯಿತು. ಇನ್ನೊಂದಕ್ಕೆ ಪೊರೆ ಬಂದಿತ್ತು. ಹೀಗಾಗಿ ಓದಲು ಆಗದ್ದಕ್ಕೆ ಚಟಫಟಿಸುತ್ತಿದ್ದರು. ಆ ಕಣ್ಣು ಶಸ್ತ್ರಚಿಕಿತ್ಸೆಗೆ ಒಳಗಾಗಿ ಕಣ್ಣು ಚನ್ನಾಗಿ ಕಾಣಿಸತೊಡಗಿದಾಗ ಖುಷಿಯೋ ಖುಷಿ. ಪುಸ್ತಕಗಳನ್ನು ಓದತೊಡಗಿದರು. ಎಂ.ಎ. ಕನ್ನಡದ ಅಭ್ಯಾಸಿಗಳಿಗೆ ಪಠ್ಯವಾಗಿದ್ದ ಮಹಾಭಾರತವನ್ನು ಲಿಂಗೈಕ್ಯರಾಗುವ ಒಂದು ವಾರದ ಮೊದಲು ಓದಿದ್ದರು.

ಮನೆಯಲ್ಲಿ ಯಾರಿಗೂ ಹೇಳದೆ, ಒಂದು ಬೆಳಗಿನ ಜಾವ ಪೂಜೆ ಮುಗಿಸಿ ಹೊರಟು ದಾವಣಗೆರೆಯ ವಿಶ್ವಕಲ್ಯಾಣ ಮಂಟಪಕ್ಕೆ ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮಿಗಳ ಸನ್ನಿಧಿಗೆ ಬಂದೆ. ನಾನು ಓದುತ್ತಿದ್ದ ಪುಸ್ತಕಗಳ ಜಾಡು ಹಿಡಿದು ನಮ್ಮ ತಾತಂದಿರು ದಾವಣಗೆರೆಯಲ್ಲಿದ್ದ ನಮ್ಮ ಪೂರ್ವಾಶ್ರಮದ ಬಂಧು ಒಬ್ಬರಿಗೆ ನೋಡಲು ಹೇಳಿದರು. ಅವರು ಪತ್ತೆ ಹಚ್ಚಿ ತಿಳಿಸಿದಾಗ ಮರುದಿನ ಕಾರು ತೆಗೆದುಕೊಂಡು ಬಂದು ಬಿಟ್ಟರು. ಸಾಕಷ್ಟು ವಾದ-ವಿವಾದ, ಚರ್ಚೆ ನಡೆದು (ತಾತ್ಕಾಲಿಕವಾಗಿಯಾದರೂ ಮನೆಗೆ ಹೋಗುವುದು ಒಳ್ಳೆಯದು ಎಂಬ ಗುರುಗಳ ಸಲಹೆಯ ಮೇರೆಗೆ) ಮನೆಗೆ ಹೋಗುವುದು ನಿರ್ಧಾರವಾಯಿತು. ಆಗ ಪೂಜ್ಯರು ದೀಕ್ಷೆ ಕೊಟ್ಟು, ಹೆಸರು ಬದಲಿಸಿದ್ದಲ್ಲದೆ "ಅಕ್ಕಮಹಾದೇವಿಯ ಭಾವಚಿತ್ರ ಕೊಟ್ಟು ಅಕ್ಕನ ಅನುಗ್ರಹ ಗಳಿಸಿಕೊಳ್ಳಿರಿ" ಎಂದು ಆಶೀರ್ವದಿಸಿ ಕಳಿಸಿಕೊಟ್ಟರು.

ಮನೆಗೆ ಬಂದ ನಾನು ಅಂತರ್ಮುಖಿಯಾಗಿ ತಪಸ್ಸಿನಲ್ಲಿ ತೊಡಗಿದೆ. ಆಗ ನಮ್ಮ ತಾಯಿಯವರಲ್ಲಿ ಬದಲಾವಣೆ ಆರಂಭವಾಯಿತು. ನಾನು ಒಬ್ಬಳೇ ಮಗಳು, ಇನ್ನೊಬ್ಬ ತಮ್ಮನಿದ್ದ. ಆದರೆ ಆತ ಜವಾಬ್ದಾರಿ ವ್ಯಕ್ತಿಯಾಗಿ ರೂಪುಗೊಂಡಿರಲಿಲ್ಲ. ಮನೆಯ ಜವಾಬ್ದಾರಿ ನನ್ನ ಮೇಲೆ ಇತ್ತು. ತಾತನವರು ಕೊಡುತ್ತಿದ್ದ ಮಾಸಿಕ ಹಣ ಜೋಪಾನವಾಗಿ ಖರ್ಚು ಮಾಡುವುದು ನನ್ನ ಹೊಣೆಯಾಗಿತ್ತು. ಹೀಗಾಗಿ, "ನೀನು ಮನೆಬಿಟ್ಟು ಹೋದರೆ ಹೇಗೆ?" ಎಂದು ತಾಯಿಯವರು ಹೇಳುತ್ತಿದ್ದರು. "ಅಹುದು, ನನಗೆ ಮದುವೆ ಮಾಡುತ್ತೀವಿ ಎನ್ನುವಿರಲ್ಲ ನಾನು ಗಂಡನ ಮನೆಗೆ ಹೋದರೆ?" ಎಂದು ಕೇಳುತ್ತಿದ್ದೆ.

"ನಿಮ್ಮನ್ನೇ ನಂಬಿಕೊಂಡು ಬದುಕುತ್ತಿರುವ ನನ್ನಂಥ ತಾಯಿಯನ್ನು ಬಿಟ್ಟು ಹೋಗುತ್ತೇನೆ ಎನ್ನುತ್ತೀಯಲ್ಲ. ಹೆತ್ತ ತಾಯಿಯ ಕಣ್ಣಿನಲ್ಲಿ ನೀರು ಹಾಕಿಸಿ, ನೀನು ಸಾಧಿಸುವುದು ಏನನ್ನು?" ಎಂಬ ಪ್ರಶ್ನೆಯನ್ನು ಮುಂದಿಟ್ಟರು.

"ಅಮ್ಮಾ, ಒಂದು ಅಣೆಕಟ್ಟು ಕಟ್ಟುವಾಗ ಸಾವಿರಾರು ಎಕರೆ ಜಮೀನು ನೀರಲ್ಲಿ ಮುಳುಗುತ್ತವೆ. ಹಾಗಂತ ಅಣೆಕಟ್ಟು ಕಟ್ಟುವುದು ನಿಲ್ಲಿಸುವುದಿಲ್ಲ. ಏಕೆಂದರೆ, ಸಾವಿರಾರು ಎಕರೆ ನೀರಲ್ಲಿ ಮುಳುಗಿದರೂ ಮುಂದೆ ಲಕ್ಷಾಂತರ ಎಕರೆ ಹೊಲಗಳು ನೀರುಣ್ಣುತ್ತದೆ. ನಿನ್ನೊಬ್ಬ ತಾಯಿಯ ಕಣ್ಣಲ್ಲಿ ನೀರು ಹನಿದರೇನಂತೆ ಸಾವಿರಾರು ತಾಯಂದಿರ ಕಣ್ಣೀರು ಒರೆಸಲು ನಾನು ಹೋಗುವೆ." ನನ್ನ ಉತ್ತರ. ಅಕ್ಕಮಹಾದೇವಿಯ ಸಾಕ್ಷಾತ್ಕಾರವಾಯಿತು. ತಪಸ್ಸು ಫಲಿಸತೊಡಗಿತು. ನನ್ನ ಕಣ್ಣುಗಳು ತೇಜಃಪುಂಜವಾಗಿ ಹೊಳೆಯತೊಡಗಿದವು. ನಾನು ಪೂಜೆ ಮುಗಿಸಿ ಕೋಣೆಯಿಂದ ಹೊರಬಂದರೆ ತಾಯಿಯವರು ಬೆರಗಾಗಿ ನೋಡಿ ಭಾವುಕರಾಗಿ, "ನೀನು ನನ್ನ ಮಗಳೆ?! ನಾನು ನಿಮಿತ್ತ ಮಾತ್ರ ತಾಯಿ. ನಿನ್ನ ದಾರಿಗೆ ಇನ್ನು ನಾನು ಅಡ್ಡಿಯಾಗುವುದಿಲ್ಲ. ನಿನಗೆ ಇಷ್ಟವಿದ್ದಲ್ಲಿ ಹೋಗು." ಎಂದು ತಾತಂದಿರಿಂದ ಬೈಯಿಸಿಕೊಂಡು ಪ್ರೋತ್ಸಾಹಿಸತೊಡಗಿದರು. "ನಿನ್ನಿಂದಲೇ (ಧಾರ್ಮಿಕ ಪ್ರವೃತ್ತಿ ಬೆಳೆಸಿದ್ದರಿಂದ) ನಿನ್ನ ಮಗಳು ಕೆಟ್ಟಿದ್ದು." ಎಂದು ತಾತಂದಿರು ಚುಚ್ಚು ಮಾತುಗಳನ್ನು ಆಡುತ್ತಿದ್ದರು. ಅದನ್ನೆಲ್ಲ

ಸಹಿಸಿಕೊಳ್ಳತೊಡಗಿದರು. ಒಂದು ದಿನ ಅವರಿಗೆ ತಿಳಿಸಿ ನಾನು ಶಾಶ್ವತವಾಗಿ ಹೊರಬಿದ್ದೆ.

ನಂತರ ಕೆಲವು ಸಂಕಷ್ಟಗಳು ಬಂದಾಗ, ನಮಗೆ ತೊಂದರೆ ಕೊಡುತ್ತಿದ್ದ ಸ್ವಾಮಿಗಳಿಗೆ ಗೊತ್ತಾಗಬಾರದೆಂದು ಅಜ್ಞಾತವಾಸಕ್ಕೆ ಋಷಿಕೇಶಕ್ಕೆ ಹೋಗಬೇಕಾಯಿತು. (ಈ ಬಗ್ಗೆ ವಿವರವಾಗಿ ಕಲ್ಯಾಣ ಕಿರಣದಲ್ಲಿ ಹಿಂದೆ ಬರೆದಿದ್ದೇನೆ) ಆ ದಿನಗಳಲ್ಲಿ ಗಂಗಮ್ಮನವರು ಪಟ್ಟ ಯಾತನೆ ಅಪಾರ. ನಾವೆಲ್ಲಿ ಇದ್ದೇವೆ ಎಂಬುದು ತಿಳಿಯದ್ದು ಒಂದು ಕಡೆ, ನಮ್ಮ ವಿರೋಧಿ ಸ್ವಾಮಿಗಳು ಮತ್ತು ಅವರ ಶಿಷ್ಯರು ಹರಡುತ್ತಿದ್ದ ಊಹಾಪೋಹ ಇನ್ನೊಂದು ಕಡೆ. ತಮ್ಮ ಅನುಭವವನ್ನು ನೆನಪಿನಾಳದಿಂದ ಎಂಬ ಪುಸ್ತಕದಲ್ಲಿ ಅವರು ಬರೆದಿದ್ದಾರೆ. ನಮ್ಮಗಳ ಒಳಿತಿಗಾಗಿ ಪ್ರಾರ್ಥಿಸಿದ್ದಾರೆ. ಇಡೀ ಜೀವನ ಪರ್ಯಂತರ ಅವರು ಮಾಡಿದ ಪೂಜೆ ಮತ್ತು ಪುಣ್ಯ ಕೆಲಸಗಳೇ ಸಂಕಷ್ಟಗಳ ಸಾಗರದಲ್ಲಿ ಬೆಂಡಿನಂತೆ ಎತ್ತಿಹಿಡಿದಿವೆ. ಶರಣರ ಸಾತ್ವಿಕ ಬದುಕನ್ನು ಬದುಕಿದ್ದಾರೆ. ಇಷ್ಟಲಿಂಗ ಪೂಜೆ ಇಲ್ಲದೆ ಒಂದು ಹನಿ ನೀರನ್ನೂ ಕುಡಿಯುತ್ತಿರಲಿಲ್ಲ. ಎರಡು ಹೊತ್ತು ಪೂಜೆ. ಸೂರ್ಯಾಸ್ತ ಆದ ಮೇಲೆ ಪೂಜೆ ಇಲ್ಲದೆ ನೀರು ಕುಡಿಯುತ್ತಿರಲಿಲ್ಲ. 89 ವರ್ಷ ವಯಸ್ಸಿನಲ್ಲೂ ಯಾರ ಕೈ ಹಿಡಿದುಕೊಳ್ಳದೆ ನಡೆಯಬೇಕೆಂಬ ಛಲದಿಂದ ಬಸವ ಮಂಟಪದ ಮೆಟ್ಟಿಲನ್ನು ತಾವೊಬ್ಬರೇ ಇಳಿದು ಹತ್ತುತ್ತಿದ್ದರು. ಅವರ ಚಟುವಟಿಕೆ ನೋಡಿ "ನೀವು ನೂರುವರ್ಷ ಖಂಡಿತಾ ಇರುತ್ತೀರಿ." ಎಂದು ನಾನು ಅನ್ನುತ್ತಿದ್ದೆ. ಬಚ್ಚಲು ಮನೆಯಲ್ಲಿ ಬಿದ್ದುದೇ ಒಂದು ನೆಪವಾಗಿ ಪೆಟ್ಟು ಬಿದ್ದು, ಪ್ರಜ್ಞಾ ಶೂನ್ಯರಾದರು. ಅವರ ಕೊಡುಗೆ ನಮ್ಮ ಸಂಸ್ಥೆಗೆ ಎರಡು. ಒಂದು, ಬೆಂಗಳೂರಿನಲ್ಲಿ ಬಸವ ಮಂಟಪ ಕಟ್ಟಲು ನಿವೇಶನ; ಎರಡು, ಸಾಸಲ ಹಟ್ಟಿಯಲ್ಲಿ ಅಕ್ಕಮಹಾದೇವಿ ಮಠ ಕಟ್ಟಲು ಎರಡು ಎಕರೆ ತೋಟ. ಆದರ್ಶ ತಾಯಿಯಾಗಿ ನಮ್ಮನ್ನು ರೂಪಿಸಿದರು, ಸಾರ್ಥಕವಾದ ಬಾಳನ್ನು ಬಾಳಿದರು. ಕೆಸರಿನಲ್ಲಿ ಅರಳಿಯೂ ಕೆಸರಿಗಂಟದ ಕಮಲದಂತೆ ಸಂಸಾರದಲ್ಲಿದ್ದೂ ಸಂಸಾರವನ್ನು ಜಯಿಸಿದರು.

ದೆಹಲಿ ಬಸವ ಮಂಟಪದಲ್ಲಿ ವಿದ್ಯಾರ್ಥಿಗಳಿಗೆ ಅವಕಾಶ

ನವದೆಹಲಿಯ ಪಾಲಮ್ ಪ್ರದೇಶದಲ್ಲಿ ಮಹಾವೀರ ಎನ್‌ಕ್ಲೇವ್‌ದಲ್ಲಿ ಇರುವ ಮಾತಾ ಆಶ್ರಮದ ಬಸವ ಮಂಟಪದಲ್ಲಿ ಶುಲ್ಕ ಸಹಿತವಾಗಿ ವಿದ್ಯಾರ್ಥಿಗಳಿಗೆ ಅವಕಾಶ ನೀಡಲಾಗುವುದು. ಐ.ಎ.ಎಸ್., ಲಾ ಮತ್ತು ಸ್ನಾತಕೋತ್ತರ ಪದವಿಗಳಿಗೆ ಓದುತ್ತಿರುವ ವಿದ್ಯಾರ್ಥಿಗಳು ಈ ಪಿ.ಜಿ.ಯಲ್ಲಿ ಅವಕಾಶ ಪಡೆದಿದ್ದಾರೆ. ಬೇರೆ ರಾಜ್ಯಗಳವರು ಇದ್ದಾರಾದರೂ ಕರ್ನಾಟಕದವರಿಗೆ ಆದ್ಯತೆಯುಂಟು. ಉತ್ತರ ಕರ್ನಾಟಕ, ದಕ್ಷಿಣ ಕರ್ನಾಟಕದ ಊಟವು ಲಭ್ಯವಿರುತ್ತದೆ. ಆಸಕ್ತರು ನೇರವಾಗಿ ಸಂಪರ್ಕಿಸಬಹುದು.

ಪೂಜ್ಯ ಶ್ರೀ ಮಾತೆ ಸರ್ವಮಂಗಳಾದೇವಿ
ಮಾತಾ ಆಶ್ರಮ, ಬಸವ ಮಂಟಪ
3/82, ಬೆಂಗಾಲಿ ಕಾಲನಿ
ಮಹಾವೀರ ಎನ್‌ಕ್ಲೇವ್
ನವದೆಹಲಿ – 110045

ದೂರವಾಣಿ:
09538095592
011–64563860
09990385640

ಅಭಿನಂದನೆ

ದೆಹಲಿ ಬಸವ ಮಂಟಪದಲ್ಲಿದ್ದು ಪ್ರಿಲಿಮನರಿಯನ್ನು ಪಾಸು ಮಾಡಿದ್ದ ಶ್ರೀ ರವೀಂದ್ರ ಐ.ಹಟ್ಟಳ್ಳಿ, ಬಿಜಾಪುರ ಇವರು ಈಗ ಮೇಯಿನ್ಸ್ ಅನ್ನು ಸಹ ಪಾಸು ಮಾಡಿದ್ದಾರೆ. ಅದಕ್ಕಾಗಿ ಅವರನ್ನು ಅಭಿನಂದಿಸುತ್ತೇವೆ.

ದೆಹಲಿಯ ಚಳಿಯಲ್ಲಿಯೂ ಬಿಸಿಯೇರಿಸಿದ "ಲಿಂಗಾಯತ ಮಹಾರ್‍ಯಾಲಿ"

– ಕೆ.ಎಸ್.ಕೋರಿಶೆಟ್ಟರ್

ನವದೆಹಲಿ ನಮ್ಮ ದೇಶದ ಶಕ್ತಿ ಕೇಂದ್ರ. ಇಲ್ಲಿಂದಲೇ ದೇಶದ ಸಮಸ್ತ ಆಡಳಿತ ವ್ಯವಸ್ಥೆಯ ನಿಯಂತ್ರಣ. ಅಂತೆಯೇ ಇದೊಂದು ಸೂಕ್ಷ್ಮ ಸಂವೇದಿ ಪ್ರದೇಶ. ಅದರಲ್ಲೂ ರಾಷ್ಟ್ರಪತಿ ಭವನ, ಸಂಸತ್ ಭವನಗಳ ಆವರಣಗಳಂತೂ ಅತಿರಕ್ಷಿತ ವಲಯಗಳೆಂದೇ ಹೆಸರಾಗಿವೆ. ರಾಜಧಾನಿಯ ಈ ಮಹತ್ವದ ಸ್ಥಳದಲ್ಲಿ ಸಮಸ್ತ ಲಿಂಗಾಯತ ಸಮುದಾಯದ ಇತಿಹಾಸದಲ್ಲಿ ಸುವರ್ಣಾಕ್ಷರದಲ್ಲಿ ಬರೆಯುವಂತಹ ಸನ್ನಿವೇಶವೊಂದು ಘಟಿಸಿತು. ಅದುವೇ ಲಿಂಗಾಯತ ಮಹಾರ್‍ಯಾಲಿ.

ಇದು ಸೀಮಿತ ಉದ್ದೇಶಕ್ಕಾಗಿ ನಡೆದ ಪಥ ಸಂಚಲನವಲ್ಲ. ಬದಲಾಗಿ ಸ್ವಾತಂತ್ರ್ಯದ ನಂತರ ವಿವಿಧ ಕಾರಣಗಳಿಂದ ತನ್ನ ಸಂವಿಧಾನಬದ್ಧ ಹಕ್ಕಿನಿಂದ ವಂಚಿತವಾಗಿದ್ದ ಸಮುದಾಯಕ್ಕೆ ನ್ಯಾಯ ಪಡೆಯಲೇಬೇಕೆಂದು ನಡೆದ ನಿಸ್ವಾರ್ಥ ಹೋರಾಟ.

ಇಲ್ಲಿ ಒಂದು ಶಿಕ್ಷಣ ಸಂಸ್ಥೆಯ ಹಿತಾಸಕ್ತಿಯಿಲ್ಲ. ತನ್ನ ಮಠವನ್ನೇ ಬೆಳೆಸಿಕೊಳ್ಳಬೇಕೆಂಬ ಹಂಬಲವಿಲ್ಲ. ಒಳಪಂಗಡಗಳ ವೈಭವೀಕರಣ ಮಾಡಬೇಕೆಂಬ ಸಣ್ಣ ಮನಃಸ್ಥಿತಿ ಇಲ್ಲ. ಬದಲಾಗಿ ಅಖಂಡ ಸಮುದಾಯದ ದಶಕಗಳ ಶಾಪವಿಮೋಚನೆ ಮಾಡಬೇಕೆಂಬ ಮಾತೃ ಹೃದಯದ ಕಳಕಳಿ ಇದೆ; ಸಾಧಿಸಬೇಕೆಂಬ ಛಲವಿದೆ. ಸಮಾಜಕ್ಕೆ ಆಗುತ್ತಿರುವ ಅನ್ಯಾಯದ ವಿರುದ್ಧ ಮಿಡಿಯುವ ಮನಸ್ಸಿದೆ. ಯುವ ಜನರ ಭವಿಷ್ಯದ ಬಗ್ಗೆ ಕನಸಿದೆ. ಲಿಂಗಾಯತ ಧರ್ಮ ಜಾಗತೀಕರಣವಾಗಬೇಕೇ ವಿನಾ ಜಾತೀಕರಣವಾಗಬಾರದೆಂಬ ಹಠವಿದೆ. ಅಂತೆಯೇ ದೆಹಲಿಯ ಚಳಿಯಲ್ಲಿಯೂ ಬಿಸಿ ಏರುವಂತೆ ಸಮಾಜದ ಸನ್ಮನಸ್ಸುಗಳ ಶರಣ ಬಂಧುಗಳನ್ನು ಸಹಸ್ರಾರು ಸಂಖ್ಯೆಯಲ್ಲಿ ಸಮಾವೇಶಗೊಳಿಸಿ ಕೇಂದ್ರ ಸರ್ಕಾರದ ಗಮನ ಸೆಳೆಯುವಲ್ಲಿ ಯಶಸ್ವಿಯಾದವರು ಧೀಮಂತ ಚೇತನ ಪೂಜ್ಯ ಶ್ರೀ ಮಹಾಜಗದ್ಗುರು ಡಾ॥ ಮಾತೆ ಮಹಾದೇವಿಯವರು.

'ಲಿಂಗಾಯತ' ಸ್ವತಂತ್ರ, ಪರಿಪೂರ್ಣ, ಪ್ರಗತಿಪರ ಧರ್ಮ. ಇದು ವೀರಶೈವವೂ ಅಲ್ಲ– ಹಿಂದುವೂ ಅಲ್ಲ. ಜೈನ, ಬೌದ್ಧ, ಸಿಖ್ ಎಂಬ ಭಾರತೀಯ ಜನ್ಯ ಧರ್ಮಗಳು ಹಾಗೂ ಇಸ್ಲಾಂ, ಕ್ರೈಸ್ತ ಎಂಬ ವಿದೇಶಿ ಮೂಲದ ಧರ್ಮಗಳು ಭಾರತದ ಸಂವಿಧಾನ ರೀತ್ಯ ಮಾನ್ಯತೆ ಪಡೆದುಕೊಂಡಿವೆ. ಮಾತ್ರವಲ್ಲ ಸಂಖ್ಯೆಯಲ್ಲಿ ಲಿಂಗಾಯತರಿಗಿಂತಲೂ ಅಧಿಕ ಇದ್ದರೂ ಧಾರ್ಮಿಕ ಅಲ್ಪ ಸಂಖ್ಯಾತರೆಂಬ ಹಣೆಪಟ್ಟಿ ಹೊಂದಿವೆ. ಆದರೆ ಈ ಮಾನ್ಯತೆ ಅಹಿಂದು ಹಾಗೂ ಅಲ್ಪ ಸಂಖ್ಯಾತರಾದ ಲಿಂಗಾಯತರಿಗೆ ಏಕೆ ಇಲ್ಲ? ಈ ಬಗ್ಗೆ ಯಾಕೆ ಚಿಂತನೆ ಈವರೆಗೂ ನಡೆಯಲಿಲ್ಲ ಎಂಬುದೇ ಯಕ್ಷ ಪ್ರಶ್ನೆ!

ಹಿಂದೆ ಯಾಕೆ ಈ ಬಗ್ಗೆ ಚಿಂತನೆ ನಡೆಯಲಿಲ್ಲ ಎಂದು ಸಿಂಹಾವಲೋಕನ ಗೈಯುತ್ತಾ ಸಾಗಿದರೆ ವಿವಿಧ ಕಾವಿ, ಖಾದಿಧಾರಿಗಳು ನಮ್ಮ ಸಾತ್ವಿಕ ಮನಸ್ಸಿನ ಕೋಪಕ್ಕೆ ಗುರಿಯಾಗ ಬೇಕಾದದರಿಂದ ಈಗ ಅದನ್ನು ನೆನೆಸಿಕೊಂಡು ಪ್ರಯೋಜನವಿಲ್ಲ ಬದಲಾಗಿ ದೃಷ್ಟಿಯನ್ನು ಭವಿಷ್ಯದತ್ತ ಇಡೋಣ. ಲಿಂಗಾಯತ ಧರ್ಮ ಈ ಶತಮಾನದಲ್ಲಾದರೂ ನಿಜಾರ್ಥದಲ್ಲಿ ವಿಶ್ವಧರ್ಮ ಆಗುವಂತೆ ಗಂಭೀರ ಪ್ರಯತ್ನ ಮಾಡೋಣ.

ಈ ದಿಟ್ಟ ಹೆಜ್ಜೆ ಇಟ್ಟ ಪ್ರಥಮರು ಪೂಜ್ಯ ಮಾತಾಜಿಯವರು. ಲಿಂಗಾಯತವು ಜಂಗಮ, ಬಣಜಿಗ, ಪಂಚಮಸಾಲಿ, ಸಾಧು, ನೊಳಂಬ, ಹೀಗೆ ಒಳಪಂಗಡಗಳ ಹೆಸರಿನಲ್ಲಿ ವಿಘಟನೆಯಾಗುತ್ತ 'ಜಾತೀಕರಣವಾಗಬಾರದು, ಬದಲಾಗಿ ವಿಶ್ವದಾದ್ಯಂತ ಸ್ಥಾನಮಾನ

ಹೊಂದಿರುವ ಜೈನ, ಬೌದ್ಧ, ಸಿಖ್, ಇಸ್ಲಾಂ, ಕ್ರೈಸ್ತ ಧರ್ಮಗಳ ಸ್ಥಾನದಲ್ಲಿ ನಿಂತು ಜಾಗತೀಕರಣಗೊಳ್ಳಬೇಕು ಎಂಬ ತಾಯಿ ಹೃದಯದ ಕಳಕಳಿಯಿಂದ ಅವಿಶ್ರಾಂತ ಹೋರಾಟ ಮಾಡುತ್ತಿರುವ ಪೂಜ್ಯ ಮಾತಾಜಿಯವರು ಫೆಬ್ರವರಿ 17 ಹಾಗೂ 18ರಂದು ನವ ದೆಹಲಿಯ ಜಂತರ್-ಮಂತರ್‌ನಲ್ಲಿ ಈ ಮಹೋದ್ದೇಶಕ್ಕಾಗಿಯೇ ರ್‍ಯಾಲಿಯನ್ನು ಸಂಘಟಿಸಿದ್ದರು. ಸಭೆ ನಡೆದಾಗ ಸಂಸದರಾದ ಧರ್ಮಸಿಂಗ್ (ಬೀದರ್), ಬೆಳಗಾವಿಯ ಸುರೇಶ್ ಅಂಗಡಿ, ಮಹಾರಾಷ್ಟ್ರದ ಕೊಲ್ಹಾಪುರ ಜಿಲ್ಲೆಯ ರಾಜೂ ಶೆಟ್ಟಿ, ಚಿಕ್ಕೋಡಿಯ ರಮೇಶ್ ಕತ್ತಿ ಭಾಗವಹಿಸಿ ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ಕೇಂದ್ರ ಸರ್ಕಾರದ ಗೃಹಮಂತ್ರಿಗಳಾದ ಶ್ರೀ ಸುಶೀಲ್ ಕುಮಾರ್ ಶಿಂಧೆ, ಧಾರ್ಮಿಕ ಅಲ್ಪ ಸಂಖ್ಯಾತ ಸಚಿವರಾದ ಶ್ರೀ ರೆಹಮಾನ್ ಖಾನ್, ಪೆಟ್ರೋಲಿಯಂ ಸಚಿವ ಶ್ರೀ ವೀರಪ್ಪ ಮೊಯಿಲಿ, ರೇಲ್ವೆ ಸಚಿವ ಶ್ರೀ ಮಲ್ಲಿಕಾರ್ಜುನ ಖರ್ಗೆ, ಸಾರಿಗೆ ಸಚಿವ ಆಸ್ಕರ್ ಫರ್ನಾಂಡಿಸ್, ಎ.ಐ.ಸಿ.ಸಿ ಪ್ರಧಾನ ಕಾರ್ಯದರ್ಶಿ ದಿಗ್ವಿಜಯ ಸಿಂಗ್ ಅವರಿಗೆ ಲಿಂಗಾಯತ ಧರ್ಮಕ್ಕೆ ಸಾಂವಿಧಾನಿಕ ಮಾನ್ಯತೆಗಾಗಿ ನೇರವಾಗ ಮನವಿ ಅರ್ಪಿಸಲಾಯಿತು. ಮಾನ್ಯರಾದ ರಾಷ್ಟ್ರಪತಿ, ಪ್ರಧಾನ ಮಂತ್ರಿ, ಶ್ರೀಮತಿ ಸೋನಿಯಾಗಾಂಧಿ, ಶ್ರೀ ರಾಹುಲ್ ಗಾಂಧಿ ಅವರಿಗೆ ಕಾರ್ಯಾಲಯಕ್ಕೆ ಮನವಿ ಸಲ್ಲಿಸಲಾಯಿತು.

ಕರ್ನಾಟಕ, ತಮಿಳುನಾಡು, ಆಂಧ್ರಪ್ರದೇಶ, ಮಹಾರಾಷ್ಟ್ರ ಮಾತ್ರವಲ್ಲ ದೆಹಲಿಯ ಸ್ಥಳೀಯ ಲಿಂಗಾಯತರೂ ಬಹುಸಂಖ್ಯೆಯಲ್ಲಿ ಪಾಲ್ಗೊಂಡು ಯಶಸ್ವಿಗೊಳಿಸಿದ ಮಹಾರ್‍ಯಾಲಿ ರಾಜಧಾನಿಯಲ್ಲಿ ನಮ್ಮ ಸಂಘಟನಾ ಶಕ್ತಿ ಪ್ರದರ್ಶನಕ್ಕೆ ದೊರೆತ ಅಭೂತಪೂರ್ವ ಅವಕಾಶವಾಯಿತು. ಮೂರು ಸಾವಿರ ಜನ ಭಾಗವಹಿಸಿದ್ದು ಎಲ್ಲರ ಗಮನ ಸೆಳೆಯಿತು.

ಹೋಗಿ ಬಾರವ್ವ......

(ಪೂಜ್ಯ ಶರಣೆ ಗಂಗಮ್ಮನವರಿಗೆ ವಿದಾಯ)

ಹೋಗಿ ಬಾರವ್ವ (ಗಂಗಮ್ಮ) ತಾಯಿ, ನೀನು ಹೋಗಿ ಬಾರವ್ವ
ಧರ್ಮದ ಒಳಿತಿಗಾಗಿ ಒಡಲ ಕುಡಿಯ ನೀಡಿದ ತಾಯಿಯೇ ನೀನು ಹೋಗಿ ಬಾರವ್ವ
ಮಿನುಗು ರತ್ನವ ನೀಡಿದ ತಾಯಿಯೇ ನೀನು ಹೋಗಿ ಬಾರವ್ವ !! ಪ !!

ನೀಲಗಂಗಮ್ಮಳ ಒಡಲ ಕುಡಿಯೊಂದನು ನೀನು ಹೆತ್ತೆಯವ್ವ
ಗುರು ಬಸವನ ಮುದ್ದು ಕಂದಮ್ಮಳನ್ನು ನೀನು ಪೊರೆದೆಯವ್ವ
ಆದಿ ಪ್ರಮಥರ ಕರುಣೆಯ ಶಿಶುವನು ಎತ್ತಿ ಆಡಿಸಿದ ಪುಣ್ಯವು ನಿನ್ನದವ್ವ
ಹೋಗಿ ಬಾರವ್ವ (ಗಂಗಮ್ಮ) ತಾಯಿ, ನೀನು ಹೋಗಿ ಬಾರವ್ವ !! 2 !!

ಅಂದು ನೀವು ಮಿಡಿದ ಕಂಬನಿಯು ಇಂದು ಜ್ಞಾನದ ಸಾಗರ
ನಿಮ್ಮ ಮಿಡಿದ ಹೃದಯ ಬಡಿತವಿಂದು ಧರ್ಮದ ಝೇಂಕಾರ
ನಿಮ್ಮ ಒಡಲನೋವು ಇಂದು ಹಸಿದ ಒಡಲಿಗೆ ಓಗರ
ಹೋಗಿ ಬಾರವ್ವ (ಗಂಗಮ್ಮ) ತಾಯಿ, ನೀನು ಹೋಗಿ ಬಾರವ್ವ !! 3 !!

ಜಾತಿ ಶೂಲೆಯ ತೆಗೆದು, ಧರ್ಮದ ಕಟ್ಟಿಗೆ ಕಟ್ಟಿ
ಲಿಂಗದೇವನೆಂಬ ಹೆಸರಿಟ್ಟು ಕರೆದು, ಐದಕ್ಕೆ ಮತ್ತೊಂದು ಆಚಾರವ ಜೋಡಿಸಿ
ಬಸವನ ಹಿರಿಮೆ ಮೆರೆವ ವೀರ ಸನ್ಯಾಸಿನಿಯ ತಾಯಿಯೇ
ಹೋಗಿ ಬಾರವ್ವ (ಗಂಗಮ್ಮ) ತಾಯಿ, ನೀನು ಹೋಗಿ ಬಾರವ್ವ !! 4 !!

ನಿಮ್ಮ ಉಡುಗೊರೆಯು ಮನುಕುಲದ ನಂದಾದೀಪ
ನಿಮ್ಮ ಕರುಳಿನ ಬಳ್ಳಿ ಅಪ್ಪಾಜಿಯ ಆಶಾದೀಪ
ಹೇಗೆ ಹೇಳುವುದು ತಾಯಿ ನಿಮಗೆ ವಿದಾಯ ?
ಹೋಗಿ ಬಾರವ್ವ (ಗಂಗಮ್ಮ) ತಾಯಿ, ನೀನು ಹೋಗಿ ಬಾರವ್ವ !! 5 !!

ನಿಮಗಾಗಿ ಮಿಡಿಯಿತು ಎಮ್ಮ ಮಾತೆಯ ಹೃದಯವು
ನಿಮಗಾಗಿ ಮರುಗಿತು ಸಕಲ ಶರಣರ ಮನವು
ಮಹಾಮಾತೆ ನಿಮಗಿಂದು ಕೋಟಿ ನಮನವು
ಶರಣಾರ್ಥಿ ತಾಯಿಯೇ, ನಿನಗೆ ಶರಣು ಶರಣಾರ್ಥಿ !! 6 !!

ರಚನೆ :- ಶರಣ ಗಂಗಾಧರ ಕಟ್ಟಿ

ಹುಟ್ಟು ಹಬ್ಬದ ನುಡಿ ನಮನ

ಅಯ್ಯಾ ನಿಮ್ಮ ಶರಣರ ಜ್ಞಾನವ ಕಂಡು ಭಕ್ತಿ ಪಥವ ಹಿಡಿದೆನು
ಅಯ್ಯಾ ನಿಮ್ಮ ಶರಣರ ಭಕ್ತಿಯ ಕಂಡು ಸತ್ಯ ಸೂತ್ರವ ಹಿಡಿದೆನು
ಅಯ್ಯಾ ನಿಮ್ಮ ಮಗಳು ಮಾತೆ ಮಹಾದೇವಿಯ ಸತ್ಯ ತತ್ತ್ವವ ಕಂಡು
ಅಯ್ಯಾ ನೀವು ಕೊಟ್ಟ ಸಮಾನತೆಯ ಸೂತ್ರದ ಫಲವಾಗಿ
ಅಯ್ಯಾ ನೀವು ಕೊಟ್ಟ ಇಷ್ಟಲಿಂಗವೆಂಬ ಲಿಂಗದೇವನ ಫಲವಾಗಿ
ಅಯ್ಯಾ ನೀವು ಕೊಟ್ಟ ಲಿಂಗಾಯತ ಧರ್ಮದ ಫಲವಾಗಿ
ಅಯ್ಯಾ ನೀವು ಕೊಟ್ಟ ಏಕದೇವೋಪಾಸನೆಯ ಫಲವಾಗಿ
ಅಯ್ಯಾ ಬಸವಯ್ಯಾ ಬದುಕಿದೆನು ನಾನು ನಿಮ್ಮ ತತ್ತ್ವವ
ಮತ್ತೆ ಬಿತ್ತಿದ ಪೂಜ್ಯ ಮಾತಾಜಿಯ ಶ್ರಮದಿಂದ
ಕಾಣಾ ಗುರು ಬಸವೇಶ.

-ದಿಲೀಪ ಭತಮುರ್ಗೆ,
ರಾ.ಬ.ದಳ, ಬೆಂಗಳೂರು

ಪ್ರಪಂಚದ ಇತಿಹಾಸದಲ್ಲಿಯೇ ಸಕಲ ಜೀವರಾಶಿಗೆ ಲೇಸನ್ನೇ ಬಯಸಿದ್ದರು ಬಸವಾದಿ ಶರಣರು. ಆ ಶರಣರ ತತ್ತ್ವವನ್ನು ಮತ್ತೆ ಬಿತ್ತಿ ಬೆಳೆಸಿ ನೊಂದ ಹೃದಯಗಳಿಗೆ ಬಡ ಬಗ್ಗರಿಗೆ, ದೀನ ದಲಿತರಿಗೆ, ಮಮತೆಯ ಮಡಿಲ ಚಾಚಿ ಅಜ್ಞಾನದ ಅಂಧಕಾರವ ಕಳೆದು, ಮನದ ಮಂದಿರವನ್ನು ಬೆಳಗಿದಂಥ ನಮ್ಮ ನಿಮ್ಮೆಲ್ಲರ ಆರಾಧ್ಯ ದೇವತೆ, ಸ್ತ್ರೀಕುಲ ಕಣ್ಮಣಿ ಕರುಣಾಮಯಿ, ಗುರು ಮಾತೆ, ಸಂಗೀತ ಶಾರದೆ, ಸಾಹಿತ್ಯ ಲೋಕದ ಸರಸ್ವತಿ , ಅಕ್ಕಮಹಾದೇವಿಯ ಅವತಾರಿಣಿ, ಕೋಟಿ ಕೋಟಿ ಶರಣರ ಅಮೂಲ್ಯ ರತ್ನ, ಜ್ಞಾನ ಗಂಗೆ ಪ್ರಪಂಚದ ಮೊಟ್ಟ ಮೊದಲ ಮಹಿಳಾ ಜಗದ್ಗುರು ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿಯವರಿಗೆ 69ನೆಯ ವರ್ಧಂತಿಯ ಶುಭಾಶಯಗಳು. ಶ್ರೀ ಮಾತಾಜಿಯವರ ತ್ಯಾಗದ ಮುಂದೆ, ಸಾಧನೆಯ ಮುಂದೆ, ಸತ್ಯದ ನಡೆ ನುಡಿಗಳ ಮುಂದೆ ಇಡೀ ಮನುಕುಲವೆಲ್ಲ ತಲೆಬಾಗಿ ತಮಗೆ ಅನಂತ ಶರಣು ಶರಣಾರ್ಥಿಯನ್ನು ಸಲ್ಲಿಸುತ್ತ ಸೃಷ್ಟಿಕರ್ತ ಲಿಂಗದೇವ ಮತ್ತು ಗುರು ಬಸವಣ್ಣನವರು ಆಯುಷ್ಯ, ಆರೋಗ್ಯ ಭಾಗ್ಯವನ್ನು ಕರುಣಿಸಲೆಂದು ಪ್ರಾರ್ಥಿಸುತ್ತೇವೆ.

ಶರಣು ಶರಣಾರ್ಥಿಗಳೊಂದಿಗೆ
ಕೇಂದ್ರ ರಾಷ್ಟ್ರೀಯ ಬಸವ ದಳ ಮತ್ತು
ಗಣಾಚಾರ ದಳ, ಬಸವ ಸಮಾಜ ವೇದಿಕೆ, ಬೆಂಗಳೂರು.

ಉಳವಿಯ ಮಹಾಮನೆಗವಿ ಸ್ವಚ್ಛತಾ ಕಾರ್ಯಕ್ರಮ-2

ಲೇಖಕರು:- ಶರಣ ಜಿ. ಆರ್. ಕಟ್ಟಿ

ಮಹಾಮನೆಗವಿಯ ಸ್ವಚ್ಛತೆಗೆ ಶರಣರು ಬರೆದಂತಹ ಕಾಲಜ್ಞಾನದ ವಚನಗಳು ಕೂಡ ಸಹಕಾರಿಯಾಗಿವೆ. ಚನ್ನಬಸವಣ್ಣನವರು ಮಹಾಮನೆಯ ಗವಿಯಲ್ಲಿ ಗಣಪರ್ವ ನಡೆಯುವ ಬಗೆಗೆ ಉಲ್ಲೇಖಿಸಿದ್ದಾರೆ.

"ರಾಯನು ಗದ್ದುಗೆಯ ಮೇಲೆ ಕುಳಿತು ರಾಜ್ಯವಂಗೈಯ್ಯುತ್ತಿರಲು ಏಳನೂರು ಎಪ್ಪತ್ತು ಅಮರ ಗಣಂಗಳು ಸಹಿತ ಪ್ರಭುದೇವರು ಸಹಿತ ಉಳುವೆಯ ಮಹಾಮನೆಗೆ ಬಂದೇವು. ಅಲ್ಲಿ ಎಲ್ಲಾ ಗಣಂಗಳು ಸಹಿತ ಗಣಪರ್ವವಂ ಮಾಡಿ ಅಲ್ಲಿಂದ ಕಲ್ಯಾಣಕ್ಕೆ ಬಂದೇವು........."

ಮೇಲಿನ ಕಾಲಜ್ಞಾನ ವಚನದ (ಆಕರ ಪುಸ್ತಕ 'ಬಸವ ಯುಗದ ವಚನೇತರ ಸಾಹಿತ್ಯ' ಪು.ಸಂ. 168) ಸಾಲುಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ಗವಿ ಸ್ವಚ್ಛತಾ ಕಾರ್ಯವನ್ನು ನಾವು ಮಾಡುತ್ತಿರುವುದು ಪ್ರಮಥರು ಮಾಡಿದ ಸಂಕಲ್ಪವೆಂದೆನಿಸುತ್ತದೆ ಮತ್ತು ಇನ್ನೂ ಅನೇಕ ಶರಣರ ಕಾಲಜ್ಞಾನ ವಚನಗಳಲ್ಲಿ ಉಳುವೆ ಬಗೆಗೆ ಪ್ರಸ್ತಾಪಿಸಿದ್ದಾರೆ. ಆದರೆ ಇದರ ಸತ್ಯಾಸತ್ಯತೆಯನ್ನು ಪರಾಮರ್ಶಿಸುವುದು ನಮ್ಮಿಂದ ಸಾಧ್ಯವಿಲ್ಲ . ಇದು ಸಮಯಕ್ಕೆ ಮತ್ತು ಪೂಜ್ಯರಿಗೆ ಬಿಟ್ಟಂತಹ ವಿಷಯ. ಆದ್ದರಿಂದ ನಾವು ಕೇವಲ ಪ್ರಯತ್ನದಲ್ಲಿ ಮಾತ್ರ ನಂಬಿಕೆ ಇಟ್ಟು ಉಳಿದುದನ್ನು ಶರಣರ ಪಾದಕ್ಕೆ ಸಮರ್ಪಿಸುವುದು ಸೂಕ್ತ.

ಈಗಾಗಲೇ ಫೆಬ್ರವರಿ ಮಾಹೆಯಲ್ಲಿ ಪ್ರಕಟವಾದ ಲೇಖನವನ್ನು ಓದಿ ಅನೇಕ ಕಡೆಗಳಿಂದ ಶರಣರು ಸ್ವಚ್ಛತಾ ಕಾರ್ಯಕ್ಕೆ ಆಗಮಿಸುತ್ತಿದ್ದಾರೆ. ಕಾರಣ ಅವಕಾಶವಿರುವ ಹಾಗೂ ಕಾಯಕಮಾಡಲು ಶಕ್ತವಿರುವ ಶರಣರು ಸ್ವಚ್ಛತಾ ಕಾರ್ಯಕ್ಕೆ ಆಗಮಿಸಬೇಕೆಂದು ತಮ್ಮಲ್ಲಿ ವಿನಂತಿ.

ಆತ್ಮೀಯ ಶರಣಬಂಧುಗಳಲ್ಲಿ ವಿನಂತಿಸುವುದೇನೆಂದರೆ ಈಗಾಗಲೇ ಉಳವಿಯ ಮಹಾಮನೆಗವಿ ಸ್ವಚ್ಛತಾ ಕಾರ್ಯಕ್ರಮವನ್ನು ದಿನಾಂಕ 11-04-2014 ರಿಂದ 23-04-2014ರ ವರೆಗೆ ನಿಗದಿಪಡಿಸಲಾಗಿತ್ತು , ಆದರೆ ಏಪ್ರಿಲ್ 17 ರಂದು ಲೋಕಸಭಾ ಚುನಾವಣೆಯ ನಿಮಿತ್ತ ಸ್ವಚ್ಛತಾ ಕಾರ್ಯಕ್ರಮವನ್ನು ಮುಂದೂಡಲಾಗಿದೆ. ದಿನಾಂಕ 19-04-2014 ರಿಂದ 30-04-2014ರವರೆಗೆ ಸ್ವಚ್ಛತಾ ಕಾರ್ಯಕ್ರಮವು ನಡೆಯುವುದು. ಸೇವೆ ಮಾಡಲು ಇಚ್ಛಿಸುವ ಶರಣರು ಆದಷ್ಟು ಬೇಗನೆ ಕೆಳಕಾಣಿಸಿದ ಮೊಬೈಲ್ ಸಂಖ್ಯೆಗಳನ್ನು ಬಳಸಿ ತಾವುಗಳು ಬರುವ ದಿನಾಂಕ ಹಾಗೂ ಶರಣರ ಸಂಖ್ಯೆಯನ್ನು ತಿಳಿಸಬೇಕು.

ಶರಣು ಶರಣಾರ್ಥಿಗಳು

ಶರಣ ಜಿ. ಆರ್. ಕಟ್ಟಿ 9008869252
ಶರಣ ಎಸ್.ಎಸ್.ವಾಲಿ 9945200343

ಜೈ ಮಾತೆ ಜಗದ್ಗುರುವೆ ಮಾತೆ ಮಹಾದೇವಿ ಜೈ ಜೈ.
ಬಸವ ಮಹಾಮನೆಯ ಕಟ್ಟಿದಿರಿ ತಾವು
ಬಸವ ಭಕ್ತರಿಗೆಲ್ಲ ದೊರಕಿತು ಠಾವು
ನಾವೆಲ್ಲ ಕೂಡಿ, ಜಯಘೋಷ ಮಾಡಿ
ನಲಿವೆವು ತಮ್ಮನ್ನು ಹಾಡಿ ಕೊಂಡಾಡಿ ॥
ಜೈ ಮಾತೆ ಜಗದ್ಗುರುವೆ ಮಾತೆ ಮಹಾದೇವಿ ಜೈ ಜೈ

ಲಿಂಗದೇವನ ಮೆರೆದ ಪೂಜ್ಯ ಮಾತಾಜಿಗೆ ನಮನ

– ಲೀಲಾವತಿ ನಾಡಗೌಡ, ಬೆಂಗಳೂರು

ಬಸವನಾ ನಾಡಿನಲಿ, ಬಸವನಾ ಬೀಡಿನಲ್ಲಿ
ಬಸವ ಗುರುವಿಗೆ ಅಲ್ಲಿ ಸ್ಮರಣೆ ಎಲ್ಲಿತ್ತು?
ಎಲ್ಲೆಡೆ ನಮನ ಎಲ್ಲೆಡೆ ಪೂಜೆ
ನಾಲ್ಕು ಕಾಲಿನ ಆ ಮೂಕ ಎತ್ತಿಗೆ

ಎತ್ತೆತ್ತ ನೋಡಿದರೂ ಬಸವ ಕಾಲೇಜುಗಳು, ಎತ್ತೆತ್ತ ನೋಡಿದರೂ
ಲಿಂಗಾಯತ ಶಾಲೆಗಳು
ಬಸವ ತತ್ವವು ಅಲ್ಲಿ ಎಲ್ಲಿಯೂ ಇಲ್ಲ
ತಿಳಿಸಬೇಕೆಂಬ ಅರಿವು ಯಾರಿಗೂ ಇಲ್ಲ

ಮಠಗಳುಂಟು ಎಲ್ಲೆಡೆ ಸ್ವಾಮಿಗಳು ನೂರೆಂಟು
ಬಸವಗುರುವ ಮರೆತು, ಮಠದ ಸ್ವಾಮಿಗಳೇ ಮೆರೆಯುತಿಹರು
ಜನರೇನು ಮಾಡುವರು? ಇಂಥ ಸ್ವಾಮಿಗಳ ಪಡೆದು
ಗುರುವಿನಂತೆ ಶಿಷ್ಯರಾಗಿ ಬದುಕುತಿಹರು

ಲಿಂಗವನೆ ಮರೆತ ಹಲವು ಲಿಂಗಾಯತರು
ದೇವತೆಗಳ ಪೂಜಿಸುತ ವೀರಶೈವರಾದರು
ಹೋಮ ಹವನದ ಮಾಡಿ, ಮಡಿ ಮೈಲಿಗೆಯ ಆಚರಿಸಿ
ತಮ್ಮ ಅಸ್ತಿತ್ವವನೆ ಮರೆತು ಬಿಟ್ಟರು.

ತುಂಡು ತುಂಡಾಯಿತು ಲಿಂಗಾಯತ ಧರ್ಮ
ಜಾತಿ ಎಂದು ಜನ ತಿಳಿದು ಒಪ್ಪಿ, ಅಪ್ಪಿಕೊಂಡರು ಅದನ
ತಂದೆ ಬಸವೇಶನ, ತಾಯಿ ವಚನಾಂಬೆಯ ಮರೆತು
ತಬ್ಬಲಿಗಳಾಗಿ ಹೀಗೆ ಅಲೆಯುತಿಹರು

ಅಪ್ಪ ಬಸವನ ತತ್ವ ಉಳಿಸಬಲ್ಲದು ಜಗವ
ಅದಕ್ಕಾಗಿ ಬಂದರು ಲಿಂಗಾನಂದ ಸ್ವಾಮಿಗಳು
ಶ್ರೀಗಂಧದಂತೆ ಬಾಳನು ಸವೆಸಿ ಬಸವನತ್ತ ನಮ್ಮ
ಕರೆದೊಯ್ದರು ಪ್ರವಚನದ ಶ್ರೀವಾಣಿ ಹರಿಸಿದರು.

ಗುರುವಿನಾಣತಿಯಂತೆ ಬಸವ ಪಥದಲಿ ನಡೆದು
ಮಾತಾಜಿ ಬದುಕನ್ನು ಬಸವ ಗುರುವಿಗೆ ಮುಡುಪಿಟ್ಟರು
ಬಸವ ತತ್ವವ ತಿಳಿಸಿ ಅದರಂತೆ ಆಚರಿಸಿ
ಶರಣ ಸಮಾಜವನ್ನೇ ಕಟ್ಟಿ ತೋರಿದರು

ಧರ್ಮಪಥವನು ತೋರಿ ಎಮ್ಮನುದ್ಧರಿಸಿದ
ಧೀರಯೋಗಿಣಿ ಪೂಜ್ಯ ಗುರು ಮಾತಾಜಿಯವರಿಗೆ
ಆಯುಷ್ಯ ಆರೋಗ್ಯ ಭಾಗ್ಯವನ್ನು ಕೊಟ್ಟು ರಕ್ಷಿಸಲಿ ಎಂದು
ಲಿಂಗದೇವನಲಿ ಶರಣಬಳಗದ ಪ್ರಾರ್ಥನೆ

ನೂರಾರು ಶರಣ ಶರಣೆಯರಿಂದ ರಕ್ತದಾನ
ಅರ್ಥಪೂರ್ಣವಾಗಿ ಆಚರಿಸಲ್ಪಟ್ಟ ಮಾತಾಜಿ ವರ್ಧಂತಿ ಉತ್ಸವ

– ಕೆ.ಎಸ್.ಕೋರಿಶೆಟ್ಟರ್

ಆ ದಿನ ಎಂದಿನಂತಿರಲಿಲ್ಲ. ತುಸು ವಿಶೇಷವೆಂದೇ ಹೇಳಬೇಕು. ಅನ್ನದಾನ, ವಸ್ತ್ರದಾನ, ವಿದ್ಯಾದಾನ ಮುಂತಾದವುಗಳನ್ನು ಕೇಳಿದ್ದೇವೆ. ಆದರೆ ಜೀವ ಉಳಿಸುವ ರಕ್ತದಾನವನ್ನು ಹಮ್ಮಿಕೊಳ್ಳುವುದರ ಮುಖಾಂತರ ಮಹಾಜಗದ್ಗುರುಗಳ 69ನೆಯ ವರ್ಧಂತಿ ಉತ್ಸವವನ್ನು ಅತ್ಯಂತ ಅರ್ಥಪೂರ್ಣವಾಗಿ ಆಚರಿಸಿದ ಕೀರ್ತಿ ಬೆಂಗಳೂರು ರಾಷ್ಟ್ರೀಯ ಬಸವ ದಳಕ್ಕೆ ಸಲ್ಲುತ್ತದೆ. ಬೆಂಗಳೂರಿನ ಕ್ರಿಯಾಶೀಲ ಶರಣ ಬಂಧುಗಳು ಡಾ॥ ರಾಜ್‌ಕುಮಾರ್ ಕಲಾಕ್ಷೇತ್ರದಲ್ಲಿ ದಿ.16ರಂದು ಬೆಳಗಿನಿಂದಲೇ ಭಾರತೀಯ ರೆಡ್‌ಕ್ರಾಸ್ ಸಂಸ್ಥೆಯ ಸಹಯೋಗದೊಂದಿಗೆ ನೂರಾರು ಶರಣ ಶರಣೆಯರು ರಕ್ತದಾನ ಮಾಡಿದರು. ಆ ಮೂಲಕ ನಿಜಾರ್ಥದಲ್ಲಿ ಪೂಜ್ಯ ಮಾತಾಜಿಯವರಿಗೆ ಹುಟ್ಟುಹಬ್ಬದ ಶುಭಾಶಯ ಕೋರಿದರು. ಈ ಮೂಲಕ ವಿನೂತನ ಪ್ರಯೋಗ ನಾಡಿನ ಎಲ್ಲಾ ಧಾರ್ಮಿಕ ಸಂಸ್ಥೆಗಳಿಗೆ ಆದರ್ಶಪ್ರಾಯವಾಯಿತು.

ಸರಿಯಾಗಿ 10.30ಕ್ಕೆ ನೂರಾರು ಶರಣ ಶರಣೆಯರ ಜಯಘೋಷಗಳ ಮಧ್ಯೆ ಸಭಾಮಂಟಪಕ್ಕೆ ಆಗಮಿಸಿದ ಮಹಾಜಗದ್ಗುರು ಮಾತಾಜಿಯವರು ತಮ್ಮ ಸುಮಧುರ ಕಂಠದಿಂದ ಸಾಮೂಹಿಕ ಪ್ರಾರ್ಥನೆಯನ್ನು ನಡೆಸಿ ವಾತಾವರಣವನ್ನು ದೈವೀಮಯಗೊಳಿಸಿದರು.

ಪ್ರಾರ್ಥನೆಯಿಂದ ಎಲ್ಲರ ಮನಸ್ಸುಗಳು ಪ್ರಸನ್ನಗೊಳ್ಳುತ್ತಿದ್ದಂತೆ ಹಿರಿಯ ಅಧಿಕಾರಿ ಕರ್ನಾಟಕ ಒಳಚರಂಡಿ ಮತ್ತು ಕೊಳಚೆ ನಿರ್ಮೂಲನ ಮಂಡಳಿಯ ಆಯುಕ್ತರಾದ ಬಿ.ಗುರು ಪ್ರಸಾದ್ ಅವರು ಬಸವ ಧ್ವಜಾರೋಹಣ ಗೈದು ಸಮಾರಂಭ ವನ್ನು ಶುಭಾರಂಭಗೊಳಿಸಿದರು.

ಹಿರಿಯ ಐ.ಎ.ಎಸ್ ಅಧಿಕಾರಿ, ರಾಜ್ಯ ಸಹಕಾರ ಇಲಾಖೆಯ ಕಾರ್ಯದರ್ಶಿ ಡಾ. ಸಿ.ಸೋಮಶೇಖರ್ ಜ್ಯೋತಿ ಬೆಳಗಿಸಿ ಉದ್ಘಾಟನೆ ಮಾಡಿ ಮಾತನಾಡುತ್ತ "ಪರಮ ಪೂಜ್ಯ ಮಾತಾಜಿಯವರ ವಾಣಿಯನ್ನು ಕೇಳುವುದು ನಮಗೆಲ್ಲ ಮಹದಾನಂದವನ್ನು ಉಂಟು ಮಾಡುತ್ತದೆ. ಆ ಕಂಚಿನ ಕಂಠದಿಂದ ಬರುವ ದೈವೀ ಸಂದೇಶಗಳು ನಮ್ಮ ಬದುಕಿಗೆ ಸ್ಫೂರ್ತಿ ಚೇತನ. ಅವರ ಬಹುಮುಖ ವ್ಯಕ್ತಿತ್ವ, ಅಗಾಧ ಪ್ರತಿಭೆ ನಾಡಿದ ಧಾರ್ಮಿಕ ಲೋಕಕ್ಕೆ ಗುರು ಬಸವಣ್ಣನವರು ಕೊಟ್ಟ ಕೊಡುಗೆ. ಅವರು ಸದಾಕಾಲ ಆರೋಗ್ಯವಂತರಾಗಿ ನೂರ್ಕಾಲ ಬಾಳಬೇಕು. ಅವರ ವರ್ಧಂತಿ ಉತ್ಸವಗಳನ್ನು ಮತ್ತೆ ಮತ್ತೆ ಆಚರಿಸುವ ಸೌಭಾಗ್ಯವಂತರು ನಾವಾಗಬೇಕು." ಎಂದು ಹೃದಯ ತುಂಬಿ ನುಡಿದರು. ಮುಖ್ಯ ಅತಿಥಿಗಳಾಗಿ ಆಗಮಿಸಿ ಗುರುನಮನ ಸಲ್ಲಿಸಿದ ಅದಮ್ಯ ಚೇತನ ಸಂಸ್ಥೆಯ ಸಂಸ್ಥಾಪಕಿ ಡಾ॥ ತೇಜಸ್ವಿನಿ ಅನಂತಕುಮಾರ್ ಹುಬ್ಬಳ್ಳಿಯ ನೆಹರು ಮೈದಾನದಲ್ಲಿ ಬಹುವರ್ಷಗಳ ಹಿಂದೆ ಪೂಜ್ಯ ಮಾತಾಜಿಯವರ ಪ್ರವಚನ ನಡೆದಾಗ ನಾನು ನನ್ನ ತಾಯಿಯೊಂದಿಗೆ ಶ್ರೋತೃವಾಗಿ ಬರುತ್ತಿದ್ದೆ. ಅವರ ಮಧುರ ವಾಣಿಯಿಂದ ನಾನು ಪುಳಕಿತನಾಗಿದ್ದೇನೆ ಮತ್ತು ಜೀವನದಲ್ಲಿ ಆತ್ಮಬಲವೊಂದಿದ್ದರೆ ಮಹಿಳೆ ಏನನ್ನಾದರೂ ಸಾಧಿಸಬಹುದು ಎಂಬುದನ್ನು ಮನಗಂಡಿದ್ದೇನೆ. ಆದ್ದರಿಂದ ಅದ್ಯಮ್ಯ ಚೇತನ ಸಂಸ್ಥೆಯ ಮೂಲಕ ಪ್ರತಿನಿತ್ಯ ಸಹಸ್ರಾರು ವಿದ್ಯಾರ್ಥಿಗಳಿಗೆ ಮಧ್ಯಾಹ್ನದ ಬಿಸಿಯೂಟ ಪೂರೈಸುವ ಕೈಂಕರ್ಯವನ್ನು ಯಶಸ್ವಿಯಾಗಿ ನಡೆಸುತ್ತಿದ್ದೇನೆ. ಪೂಜ್ಯ ಮಾತಾಜಿಯವರು ಮಹಿಳೆಯರ ಪಾಲಿನ ಆಶಾಕಿರಣವಾಗಿದ್ದಾರೆ. ಅವರ ಸಂಪರ್ಕ ಮತ್ತು ಸಂಸ್ಕಾರಕ್ಕೆ ಬಂದ ಅನೇಕ ಮಹಿಳೆಯರು ಉನ್ನತೋನ್ನತ ಸಾಧನೆಯನ್ನು ಮಾಡಿ ಯಶಸ್ಸು ಕಂಡಿದ್ದಾರೆ. ಮಾತಾಜಿಯವರು ಸರ್ಕಾರದ ಒಂದು ಪೈಸೆಯ ನೆರವಿಲ್ಲದೆ ಅನಾಥಾಶ್ರಮ– ವೃದ್ಧಾಶ್ರಮಗಳನ್ನು ನಡೆಸುತ್ತಿರುವುದು ಅಭಿಮಾನದ ಸಂಗತಿ. ಇದುವೇ ಅವರ ಮಾತೃವಾತ್ಸಲ್ಯಕ್ಕೆ ಸಾಕ್ಷಿ ಎಂದರಲ್ಲದೆ ಗುರು ಬಸವಣ್ಣನವರ ಚಿಂತನೆಗಳನ್ನು ಮನೆ ಮನಕ್ಕೆ ಸತತ 45 ವರ್ಷಗಳಿಂದ ತಲುಪಿಸುತ್ತಿರುವ ಅವರ ಸಾಧನೆ

ಅಗಾಧ. ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಮಹಿಳೆ ಅಧ್ಯಾತ್ಮ ಲೋಕದ ಉತ್ತುಂಗ ಶಿಖರಕ್ಕೆ ಏರಬಹುದೆಂದು ಸಾಧಿಸಿ ತೋರಿಸಿದವರು ಪೂಜ್ಯ ಮಾತಾಜಿಯವರು" ಎಂದು ನುಡಿದರು.

ಮುಖ್ಯ ಉಪನ್ಯಾಸ ನೀಡಿದ ಸಾಹಿತಿ, ಚಿತ್ರನಟ ಚಿಕ್ಕಹೆಜ್ಜಾಜಿ ಮಹಾದೇವ ಅವರು ಪೂಜ್ಯ ಮಾತಾಜಿಯವರ ಬದುಕಿನ ವಿವಿಧ ಮಜಲುಗಳನ್ನು ಅರ್ಥಪೂರ್ಣವಾಗಿ ವಿವರಿಸಿ ಅವರ ಸಾಧನೆ ಸಮಗ್ರ ಮಹಿಳಾ ಲೋಕದಲ್ಲೊಂದು ಮೈಲಿಗಲ್ಲು ಎಂದು ಅಭಿಪ್ರಾಯ ಪಟ್ಟರು. ವಿಪ್ರೋ ಸಂಸ್ಥೆಯ ಶರಣ ಚನ್ನಬಸವಣ್ಣನವರು ಗುರು ವಂದನೆ ಸಲ್ಲಿಸಿ ಪೂಜ್ಯ ಮಾತಾಜಿಯವರಿಗೆ ಸಲ್ಲಿಸುವ ಪ್ರತಿಯೊಂದು ಪೈಸೆ ಕಾಣಿಕೆ ಸಮಾಜ ಮುಖಿಯಾಗಿ ವಿನಿಯೋಗ ವಾಗುತ್ತದೆ ಎಂದು ನುಡಿದರು.

ಬಿ.ಬಿ.ಎಂ.ಪಿ ಸದಸ್ಯೆ ಯಶೋಧಮ್ಮ ಕೃಷ್ಣಪ್ಪ, ಸದಸ್ಯ ಹೆಚ್.ಆರ್.ಕೃಷ್ಣಪ್ಪ, ಶರಣ ರೋಹಿತ್ ಕೆಂಪೇಗೌಡ, ಆಯುರ್ವಿನ್ ಸಂಸ್ಥೆಯ ಮುಖ್ಯಸ್ಥ ಶಿವಕುಮಾರ್, ಸೇರಿದಂತೆ ವಿವಿಧ ಗಣ್ಯರು ಸಮಾರಂಭದಲ್ಲಿ ಪಾಲ್ಗೊಂಡಿದ್ದರು. ಶರಣ ಶರಣೆಯರು ಪೂಜ್ಯ ಮಾತಾಜಿ ಯವರಿಗೆ ಪುಷ್ಪವೃಷ್ಟಿ – ಆರತಿ ಮಾಡಿ ಗುರುಕಾಣಿಕೆ ಸಲ್ಲಿಸಿ ಜನ್ಮದಿನದ ಶುಭಾಶಯ ಕೋರಿ ಧನ್ಯತಾ ಭಾವ ಮೆರೆದರು.

ಗುರು ವಂದನೆ ಸ್ವೀಕರಿಸಿ ಜನ್ಮದಿನದ ಸಂದೇಶ ನೀಡಿದ ಮಹಾಜಗದ್ಗುರು ಡಾ॥ ಮಾತಾಜಿಯವರು " ಶರಣ ಬಂಧುಗಳು ಏರ್ಪಡಿಸಿರುವ ಜನ್ಮದಿನದ ಕಾರ್ಯಕ್ರಮ, ತೋರಿದ ಭಕ್ತಿ–ಗೌರವ–ಪ್ರೀತಿಯಿಂದ ನನ್ನ ಹೃದಯ ತುಂಬಿ ಬಂದಿದೆ. ವ್ಯಕ್ತಿಯ ಬದುಕಿನಲ್ಲಿ ಜನ್ಮದಿನದ ಆಚರಣೆಯೆಂದರೆ ಅದೊಂದು ಆತ್ಮಾವಲೋಕನದ ದಿನ. ನಡೆದ ದಾರಿಯ ಸಿಂಹಾವಲೋಕನ ಮುಂದಿನ ನಡೆಯ ರೂಪುರೇಷೆ ಮಾಡಿಕೊಳ್ಳುವ ಪರ್ವದಿನ. ನನಗೆ ನ್ಯಾಯವಾದಿ ಅಜ್ಜ, ವೈದ್ಯ ತಂದೆ, ಮೂರುನೂರು ಎಕರೆಗಿಂತಲೂ ಮಿಕ್ಕಿ ಜಮೀನನ್ನು ಹೊಂದಿದ್ದ ಶ್ರೀಮಂತ ಕುಟುಂಬದಿಂದ ಬಂದರೂ ಮನೆತನದ ಹಿರಿಯರ ವಿರೋಧದ ಮಧ್ಯೆಯೂ ವೈರಾಗ್ಯ ಜೀವನಕ್ಕೆ ಪಾದಾರ್ಪಣೆ ಮಾಡಿದೆ. ಪ್ರಾರಂಭದಲ್ಲಿ ತಾಯಿಯ ಮನಸ್ಸಿಗೆ ನೋವು ಉಂಟಾದರೂ ಸಾವಿರಾರು ಮಹಿಳೆಯರ ಕಂಬನಿ ಒರೆಸುವುದರ ಮುಖಾಂತರ ಆ ನೋವನ್ನು ಮರೆಸಿದ್ದೇನೆ. ಆ ಮೂಲಕ ನನ್ನ ಪೂರ್ವಾಶ್ರಮದ ತಾಯಿಯೂ ನನ್ನಂತಹ ಮಗಳನ್ನು ಹೆತ್ತ ಬಗ್ಗೆ ಸಂಭ್ರಮಪಟ್ಟಿದ್ದನ್ನು ಕಂಡು ಖುಷಿಯಾಗಿದ್ದೇನೆ. ಮಕ್ಕಳು ವೈರಾಗ್ಯ ಜೀವನಕ್ಕೆ ಪಾದಾರ್ಪಣೆ ಮಾಡಬೇಕೆಂದಾಗ ಯಾವ ಮಾತಾ ಪಿತೃಗಳು ಸಮ್ಮತಿಸುವುದು ಸುಲಭವಲ್ಲ. ಅದು ನನ್ನ ಜೀವನದಲ್ಲೂ ನಡೆಯಿತು. ಆದರೆ ಮಹಾಜಗದ್ಗುರು ಲಿಂಗಾನಂದ ಅಪ್ಪಾಜಿಯವರು ತೋರಿದ ಮಮತೆ, ವಾತ್ಸಲ್ಯ, ಅನುಗ್ರಹವೇ ನನ್ನನ್ನು ವೈರಾಗ್ಯ ಪಥದಲ್ಲಿ ಗಟ್ಟಿಯಾಗಿ ಸಾಗಿಸಿತು. ಅಕ್ಕನ ಅನುಗ್ರಹದಿಂದ ಬಸವ ಪಥದಲ್ಲಿ ಸಾಗಿ ಈ ಸಮಾಜವನ್ನು ಸಂಸ್ಕರಿಸಿದ್ದೇನೆ ಎಂಬ ತೃಪ್ತಿ ನನಗಿದೆ. ಬಸವ ಪ್ರಣೀತ ಲಿಂಗಾಯತ ಧರ್ಮವನ್ನು ಜಾಗತಿಕ ಧರ್ಮಗಳ ಸಾಲಿನಲ್ಲಿ ನೋಡಿದಾಗ ನನ್ನ ಬಯಕೆ ಸಾರ್ಥಕವಾಗುತ್ತದೆ ಎಂದು ಹೃದಯ ಸ್ಪರ್ಶಿಯಾಗಿ ನುಡಿದರು.

ಪೂಜ್ಯ ಶ್ರೀ ಜಗದ್ಗುರು ಬಸವಕುಮಾರ ಸ್ವಾಮೀಜಿ, ಪೂಜ್ಯ ಶ್ರೀ ಮಾತೆ ಶಾಂತಾದೇವಿಯವರ ದಿವ್ಯ ಸಮ್ಮುಖದಲ್ಲಿ ಆಂಧ್ರಪ್ರದೇಶ್ ರಾಷ್ಟ್ರೀಯ ಬಸವ ದಳದ ಅಧ್ಯಕ್ಷರಾದ ಧನರಾಜ್ ಜೀರಗೆ ಅಧ್ಯಕ್ಷತೆ ವಹಿಸಿದ್ದರು. ರಾಜ್ಯ ರಾಷ್ಟ್ರೀಯ ಬಸವ ದಳದ ಅಧ್ಯಕ್ಷ ಬಸವರಾಜ್ ಕಗ್ಗೋಡ್, ವೀರೇಶ್ ಕುಮಾರ್, ಶ್ರೀಕಂಠಮೂರ್ತಿ, ಲೀಲಾವತಿ ನಾಡಗೌಡ, ದೇವಿಕಾ ಶರಣಪ್ಪ, ಜಯಶ್ರೀ ಶಿವಪುರ, ರಾಜ್ಯ ಭಾಷಾ ಆಯೋಗದ ಸದಸ್ಯ ಎಂ.ವೈ.ದೊಡ್ಡಮನಿ ಮುಂತಾದವರು ವೇದಿಕೆಯಲ್ಲಿದ್ದರು. ಶರಣ ಚಂದ್ರಮೌಳಿ ಸ್ವಾಗತಿಸಿದರು. ಮಂಜುನಾಥ ಬಂಡಿ ಸಭಾ ನಿರ್ವಹಣೆ ಮಾಡಿದರು. ಕುಮಾರಿ ನಿಸರ್ಗಾ ಹಾಗೂ ಚೈತ್ರ ಅವರ ವಚನಾಭಿನಯ ಎಲ್ಲರ ಮನಸುಗಳನ್ನು ಸೂರೆಗೊಂಡವು.

ಕಲ್ಯಾಣ ಕಿರಣ ಪತ್ರಿಕೆಯ ಒಡೆತನ ಮತ್ತಿತರ ವಿವರಗಳ ಪ್ರಕಟಣೆ

ಪ್ರಾರೂಪ 4 (ವಿಧಿ 8)

1.	ಪ್ರಕಟಣೆಯ ಸ್ಥಳ	ಬೆಂಗಳೂರು
2.	ಪ್ರಕಟಣೆಯ ನಿಯತಕಾಲಿಕತೆ	ಮಾಸಿಕ
3.	ಮುದ್ರಕರ ಹೆಸರು	ಶ್ರೀಮತಿ ಕಮಲಮ್ಮ
	ಭಾರತದ ಪ್ರಜೆಯೆ?	ಹೌದು
	ವಿಳಾಸ	ಪದ್ಮಶ್ರೀ ಪ್ರಿಂಟರ್ಸ್ ರಾಜಾಜಿನಗರ, ಬೆಂಗಳೂರು
4.	ಪ್ರಕಾಶಕರ ಹೆಸರು	ಪೂಜ್ಯ ಶ್ರೀ ಮಾತೆ ಕಸ್ತೂರಿದೇವಿ
	ಭಾರತದ ಪ್ರಜೆಯೆ ?	ಹೌದು
	ವಿಳಾಸ	ಕಲ್ಯಾಣ ಕಿರಣ ಕಾರ್ಯಾಲಯ ಬಸವ ಮಂಟಪ, ರಾಜಾಜಿನಗರ ಬೆಂಗಳೂರು - 560010
5.	ಸಂಪಾದಕರ ಹೆಸರು	ಪೂಜ್ಯ ಶ್ರೀಮಾತೆ ಕಸ್ತೂರಿದೇವಿ
	ಭಾರತದ ಪ್ರಜೆಯೆ?	ಹೌದು
	ವಿಳಾಸ	ಬಸವ ಮಂಟಪ, ರಾಜಾಜಿ ನಗರ ಬೆಂಗಳೂರು - 560010
6.	ಪತ್ರಿಕೆ ಒಡೆತನ ವಹಿಸಿರುವ ವ್ಯಕ್ತಿಯ ಮತ್ತು ಪಾಲುದಾರರ ಅಥವಾ ಒಟ್ಟು ಬಂಡವಾಳ	ವಿಶ್ವಕಲ್ಯಾಣ ಮಿಷನ್ (ರಿಜಿಸ್ಟರ್ಡ್ ರಿಲಿಜಿಯಸ್ ಚಾರಿಟಬಲ್ ಟ್ರಸ್ಟ್)
	ಶೇ.1.ಕಿಂತ ಹೆಚ್ಚು ಭಾಗಕ್ಕೆ ಪಾಲುದಾರರ ಹೆಸರು ಮತ್ತು ವಿಳಾಸ	ಬಸವ ಮಂಟಪ ರಾಜಾಜಿ ನಗರ, ಬೆಂಗಳೂರು-560010

ಮೇಲೆ ಕೊಟ್ಟಿರುವ ವಿವರಗಳು ನನಗೆ ತಿಳಿದ ಮಟ್ಟಿಗೆ ಮತ್ತು ನಂಬಿಕೆಯಂತೆ ನಿಜವೆಂದು ನಾನು ಪೂಜ್ಯ ಶ್ರೀ ಮಾತೆ ಕಸ್ತೂರಿದೇವಿ ಘೋಷಿಸುತ್ತೇನೆ.

ಕಲ್ಯಾಣ ಕಿರಣ, ದಿ.03-03-2012

ಪ್ರಕಾಶಕರು
ಪೂಜ್ಯ ಶ್ರೀ ಮಾತೆ ಕಸ್ತೂರಿದೇವಿ
ಬೆಂಗಳೂರು -560010



ಕೇಂದ್ರ ಸಾರಿಗೆ ಸಚಿವ ಶ್ರೀ ಆಸ್ಕರ್ ಪರ್ನಾಂಡಿಸ್ ಅವರಿಗೆ ಮನವಿ ಪತ್ರ ನೀಡಿಕೆ



ಧಾರ್ಮಿಕ ಅಲ್ಪಸಂಖ್ಯಾತರ ಕೇಂದ್ರ ಸಚಿವ ಶ್ರೀ ರೆಹಮಾನ್ ಖಾನ್ ಅವರಿಗೆ ಮನವಿ ಪತ್ರ ನೀಡಿಕೆ



ಸಾಮಾಜಿಕ ನ್ಯಾಯ ಖಾತೆಯ ಕೇಂದ್ರ ಸಚಿವ ಆಂಧ್ರ ಪ್ರದೇಶದ ರಾವ್ ಅವರಿಗೆ ಮನವಿ ಪತ್ರ ನೀಡಿಕೆ



ದೆಹಲಿಯಲ್ಲಿ ಲಿಂಗಾಯತ ಮಹಾರ್‍ಯಾಲಿಯಲ್ಲಿ ಭಾಗವಹಿಸಿದ್ದ ಜಂಗಮ ಮೂರ್ತಿಗಳ ನೇತೃತ್ವದಲ್ಲಿ ಹೋರಾಟ



ದೆಹಲಿಯಲ್ಲಿ ಲಿಂಗಾಯತ ಮಹಾರ್‍ಯಾಲಿಯಲ್ಲಿ ಭಾಗವಹಿಸಿದ್ದ ಜನಸಮೂಹ



ಸಿಖ್ ಮುಖಂಡ ಶ್ರೀ ಸತ್ನಾಮ್ ಸಿಂಗ್ ಅವರಿಂದ ಧ್ವಜಾರೋಹಣ

Registerd NO/KA/BGW/50/2012-2014, RNI 19980/70, POSTED AT MBC BANGALORE GPO ON 3rd,10th,20th, OF EVERY MONTH. LICENCED TO POST WITHOUT PRE PAYMENT WPP-17, PAGES 32+8 (COVER PAGES)